LEGISLATIVE BUSINESS

THE KARNATAKA MUNICIPAL CORPORATIONS (AMENDMENT) BILL, 1982.

Motion to Consider

SRI DHARAM SINGH (Minister for Housing and Urban Development).—Sir, I beg to move.

"That the Karnataka Municipal Corporations (Amendment) Bill, 1982 be taken into consideration."

The question was proposed.

SRI S.R. BOMMAI.—Sir, before going in to the Bill, I have given a motion under Rule 177 on breach of privilege.

MR. SPEAKER.—Do you still hold that there is a breach of privilege? The assurances given on the floor of the House do not constitute breach of privilege.

SRI S.R. BOMMAI.—Here the Government has assured on the floor of the House that elections to Corporations, Municipalities will be held by end of November, 1980.

SRI R. GUNDU RAO.—The introduction of Bill has nothing to do with this.

SRI S.R. BOMMAI.—I have given the notice three days back.

MR. SPEAKER.—My request is, you go through Page-237 of Shakder and Kaul.

SRI S.R. BOMMAI.—I know it. But I will draw.....

MR. SPEAKER.—You can raise it tomorrow. Now we shall have the Bills. ದಯವಿಟ್ಟು ಕೇಳಿ. ತಾವು ಆ ವಿಷಯದಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದರೆ ನಾಳೆಯ ದಿವಸ ಪ್ರಸ್ತಾಪ ಮಾಡಿ.

SRI H. GANGADHARAN.—Sir, I raise a preliminary objection on the disussion of this Bill.

MR. SPEAKER.—How can that be?

SRI H. GANGADHARAN.—It is already sub-judice because the same matter is before the High Court. The High Court has issued a Stay and the Writ is admitted.

MR. SPEAKER.—We are not bound by that. This House is supreme It is only a replacing Bill.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಕಾರ್ಪೊರೇಷನ್ ಆಕ್ಟ್ ೧೯೭೬ ಇದರಲ್ಲಿ ಏನಿದೆ ಇದರಲ್ಲಿ ಖಂಡಿತ ಕ್ಕೆ ಅಮೆಂಡ್‌ಮೆಂಟ್ ತರಬೇಕು ಎನ್ನುವ ಉದ್ದೇಶದಿಂದ ಈಗಾಗಲೇ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಲಾಗಿದೆ ಆರ್ಡಿನೆನ್ಸ್ ಹೊರಡಿಸಿ ಮೂರು ತಿಂಗಳಾಯಿತು. ಆದರೂ ಕೂಡ ಸರ್ಕಾರದ ಉದ್ದೇಶ

ಇಷ್ಟೇ. ಕಾರ್ಪೊರೇಷನ್‌ಗೆ ನಾಮಿನೇಷನ್ ಮಾಡತಕ್ಕಂಥ ಕಾಲದಲ್ಲಿ ಇದರ ಉದ್ದೇಶವನ್ನು ತಿಳಿಸ ಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ಈ ಸದನದ ಎಲ್ಲ ಸದಸ್ಯರಿಗೂ ಒಂದು ಅವಕಾಶವನ್ನು ಮಾಡ ಬೇಕಾಗಿದೆ. ಈ ಒಂದು ಉದ್ದೇಶದಿಂದಲೇ ಇಲ್ಲಿಯವರೆಗೂ ನಾವು ಯಾವ ಕಾರ್ಪೊರೇಷನ್‌ಗೂ ಕೂಡ ನಾಮಿನೇಟ್ ಮಾಡಿಲ್ಲ. ಮೊಟ್ಟಮೊದಲನೆಯದಾಗಿ ನಾವು ಮಾಡುತ್ತಿಲ್ಲ. ಈಗಾಗಲೇ ೧೯೬೨ರಲ್ಲಿ ಮಾನ್ಯ ಬಿ.ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಟಿ.ಸುಬ್ರಮಣ್ಯಂರವರು ಈ ಬಾತೆಗೆ ಸಂಬಂಧ ಪಟ್ಟ ಮಂತ್ರಿಗಳಾಗಿದ್ದರು. ಬಾಂಬೆ ಕಾರ್ಪೊರೇಷನ್ ಆಕ್ಟ್ ೧೯೪೭ರ ಚೌಕಟ್ಟಿನಲ್ಲಿ ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಆದಾಗ ೪೭ ಜನ ಸದಸ್ಯರುಗಳನ್ನು ನೇಮಕಮಾಡಿ ಅದರಲ್ಲಿ ಮೇಯರ್, ಡೆಪ್ಯೂಟಿ ಮೇಯರ್ ನೇಮಕ ಮಾಡಲಾಗಿದೆ. ಇಪತ್ತೈದುವರ್ಷ ಕರ್ನಾಟಕ ರಾಜ್ಯದಲ್ಲಿ ಮೈಸೂರು ಕಾರ್ಪೊರೇಷನ್ ಇದೆ, ಬೆಳಗಾಂ ಕಾರ್ಪೊರೇಷನ್ ಇದೆ, ಮಂಗಳೂರು ಕಾರ್ಪೊರೇಷನ್ ಆಗಿದೆ, ಗುಲ್ಬರ್ಗಾ ಕಾರ್ಪೊರೇಷನ್ ಆಗಿದೆ ಶಿವಮೊಗ್ಗ ಮತ್ತು ಭದ್ರಾವತಿ ಕಾರ್ಪೊರೇಷನ್ ಮಾಡಲಿಕ್ಕೆ ಸರ್ಕಾರದ ಪರಿಶೀಲನೆ ಯಲ್ಲಿದೆ. ಯಾವ ನಗರದ ಜನಸಂಖ್ಯೆ ೨ ಲಕ್ಷಕಿಂತಲೂ ಹೆಚ್ಚು ಇದ್ದು ಮತ್ತು ೧ಕೋಟಿ ರೂಪಾಯಿ ಆದಾಯವಿದ್ದು ಅಂತಹ ನಗರಸಭೆಗಳನ್ನು ಕಾರ್ಪೊರೇಷನ್ ಮಾಡಬಹುದು. ಜನಸಂಖ್ಯೆ ಬೆಳೆಯುವುದರಿಂದ ಅವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಕಾರ್ಪೊರೇಷನ್ ಮಾಡಿ ನಾಗರೀಕರಿಗೆ ಸವಲತ್ತುಗಳನ್ನು ಒದಗಿಸಿತಕ್ಕದ್ದು ಕಾರ್ಪೊರೇಷನ್ ಆಕ್ಟ್‌ನಲ್ಲಿದೆ. ನಗರಸಭೆಯ ವ್ಯಾಪ್ತಿಯಲ್ಲಿ ಆ ಒಂದು ಕಾನೂನಿನಲ್ಲಿ ಬೆಳೆಯತಕ್ಕ ಜನರು ಏನು ಇರುತ್ತಾರೆ ಅವರಿಗೆ ಒಮ್ಮಿಂದೊಮ್ಮೆಲೇ ಕಾರ್ಪೊರೇಷನ್ ಮಾಡಿದ ತಕ್ಷಣ ಕಾರ್ಪೊರೇಷನ್ ಆಕ್ಟ್ ಪ್ರಕಾರ ಮೇಯರ್ ಮತ್ತು ಉಪ-ಮೇಯರ್ ಕೆಲಸಕಾರ್ಯಗಳನ್ನು ಮಾಡಲು ಅವಕಾಶ ಮಾಡಿಕೊಟ್ಟು, ಅವರು ಇಷ್ಟು ವರ್ಷಗಳು ಮಾತ್ರ ಕೆಲಸಮಾಡಬೇಕೆಂದು ಸಮಯವನ್ನು ನಿಗದಿ ಮಾಡಲಾಗಿರುತ್ತದೆ. ಆ ಅವಧಿಯೊಳಗೆ ಅಲ್ಲಿಯ ಜನರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಹೊಸ ಕಾರ್ಪೊರೇಷನ್ ಮಾಡಿದ ಮೇಲೆ ಕಾರ್ಪೊರೇಷನ್ ಮೇಯರ್ ಮತ್ತು ಉಪ-ಮೇಯರ್‌ಗಳನ್ನು ನೇಮಕ ಮಾಡತಕ್ಕದ್ದು ಇದೆ. ನಾವು ಮೊಟ್ಟಮೊದಲನೆಯದಾಗಿ ಮಾಡುತ್ತಿಲ್ಲ, ಪ್ರಜಾಪ್ರಭುತ್ವದ ತಳಪಾಯವನ್ನು ಮಿಾರಿ, ಕಾನೂನು ಬಾಹಿರವಾಗಿ ಮಾಡುತ್ತಿಲ್ಲ. ೧೯೫೫ರಲ್ಲಿ ಅಲಹಾಬಾದ್ ಮತ್ತು ೧೯೪೯ರಲ್ಲಿ ಬಾಂಬೆ ಪೂನ ಕಾರ್ಪೊರೇಷನ್‌ಗಳಾಗಿ ಕೆಲಸ ಮಾಡಿವೆ. ಎಲ್ಲಾ ಕಾರ್ಪೊರೇಷನ್‌ಗಳ ಆಕ್ಟ್‌ಗಳನ್ನು ವಿಮರ್ಶೆಮಾಡಿ ಸಮ್ಮಲ್ಲಿ ೧೯೭೬ರಲ್ಲಿ ಹೊಸ ಕಾರ್ಪೊರೇಷನ್ ಆಕ್ಟ್ ಮಾಡಲಾಗಿದೆ. ಇದಕ್ಕೂ ಮುಂಚೆ ಬಾಂಬೆ ಕಾರ್ಪೊರೇಷನ್ ಆಕ್ಟ್ ಪ್ರಕಾರ ಹುಬ್ಬಳ್ಳಿ ಧಾರವಾಡದಲ್ಲಿ ಮಾಡಿದ್ದೇವೆ. ಇದರಿಂದ ತೊಂದರೆಯಾಗತಕ್ಕದನ್ನು ತಪ್ಪಿಸಿ ಆರ್ಡಿನೆನ್ಸ್ ರಿಪ್ಲೇಸ್ ಮಾಡಿ ತಿದ್ದುಪಡಿಯನ್ನು ತಂದಿದ್ದೇವೆ, ಇದು ಎಲ್ಲಾ ಜನರಿಗೂ ಅನುಕೂಲವಾಗ ತಕ್ಕ ರೀತಿಯಲ್ಲಿದೆ. ಈ ಒಂದು ತಿದ್ದುಪಡಿಗೆ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್.—ನಾನು ಇದಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಇನ್ನೊಂದು ಸಾರಿ ಓದುವಾಗ ತಾವು ಮೂವ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಾದ ಧರ್ಮಸಿಂಗ್‌ರವರು ಮಸೂದೆಯನ್ನು ಮಂಡಿಸುತ್ತಾ ಹಿಂದೆ ಕಾರ್ಪೊರೇಷನ್‌ಗಳಾಗಿವೆ. ಕಾರ್ಪೊರೇಷನ್ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ನಗರಗಳ ಅಭಿವೃದ್ಧಿದೃಷ್ಟಿಯಿಂದ ಮಾಡುವುದು ಸೂಕ್ತ ಎನ್ನುವ ಮಾತನ್ನು ಹೇಳಿದ್ದಾರೆ. ಆದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಸರ್ಕಾರಕ್ಕೆ ಯಾವಾಗ ಅವಶ್ಯ ಅನಿಸುತ್ತದೆಯೋ ಆಗ ನಗರಸಭೆಗಳನ್ನು ಕಾರ್ಪೊರೇಷನ್‌ಗಳಾಗಿ ಮಾಡತಕ್ಕದ್ದು ಹಿಂದಿನಿಂದ ನಡೆದುಕೊಂಡು ಬಂದಿದೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಮುನಿಸಿಪಾಲಿಟಿಗಳಿಗೆ ಹೆಸರನ್ನು ಬದಲಾಯಿಸಿ ಕಾರ್ಪೊರೇಷನ್ ಎಂದು ಹೆಸರು ಕೊಟ್ಟರೆ ಸಾಲದು. ''ಕತ್ತೆಗೆ ಕಾದುರೆ ಎಂದು ಕರೆದರೆ ಕತ್ತೆ ಕಾದುರೆಯಾಗುವುದಿಲ್ಲ'' ನಾನು ಹೇಳುವ ಅರ್ಥ ಇಷ್ಟೆ ಈಗಾಗಲೇ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಆ ಕಾರ್ಪೊರೇಷನ್‌ಗಳಿಗೆ ಇರತಕ್ಕ ತೊಂದರೆಗಳೇನು ಮತ್ತು ಕಾರ್ಪೊರೇಷನ್‌ಗಳಿಗೆ ಸೂಕ್ತವಾದ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡದೆ

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಮಾನ್ಯ ಧರ್ಮಸಿಂಗ್‌ರವರು ಗುಲ್ಬರ್ಗಾದಿಂದ ಬಂದಿದ್ದಾರೆ, ಮಂತ್ರಿಗಳಾಗಿದ್ದಾರೆ. ಅಲ್ಲಿ ಸಚಿವ ಸಂಪುಟ ಸಭೆಯನ್ನು ಮಾಡಲಾಯಿತು, ಈಗ ಗುಲ್ಬರ್ಗಾ ನಗರಸಭೆಯನ್ನು ಕಾರ್ಪೊರೇಷನ್ ಎಂದು ಘೋಷಣೆ ಮಾಡಿದ್ದಾರೆ. ಕಾರ್ಪೊರೇಷನ್ ಮಾಡಿದ ತಕ್ಷಣ ಗುಲ್ಬರ್ಗಾ ನಗರದಲ್ಲಿರತಕ್ಕ ಕೊಳಚೆ ಪ್ರದೇಶ ಮತ್ತು ಕೆಟ್ಟಿರತಕ್ಕ ರಸ್ತೆಗಳು ಹೋಗುತ್ತವೆಯೇ ? ಅಲ್ಲಿರತಕ್ಕ ಬಡವರ ಬಾಧೆತನ ಹೋಗುತ್ತದೆಯೇ ? ಆದ್ದರಿಂದ ಕಾರ್ಪೊರೇಷನ್ ಮಾಡಿದ ಮೇಲೆ ಹಣಕಾಸು ಒದಗಿಸಬೇಕು. ನಗರ ಸಮೃದ್ಧಿಯಾಗಿ ಬೆಳೆಯುವುದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ? ಹುಬ್ಬಳ್ಳಿ ದಾರವಾಡ ನಗರಸಭೆಯನ್ನು ಮಾನ್ಯ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕಾರ್ಪೊರೇಷನ್ ಮಾಡಿದರು. ಹುಬ್ಬಳ್ಳಿ ಮತ್ತು ದಾರವಾಡ ೧೨ ಮೈಲಿಗಳ ಅಂತರದಲ್ಲಿ ಕೂಡಿವೆ, ಮಧ್ಯದಲ್ಲಿ ಕೈಗಾರಿಕೋದ್ಯಮಗಳನ್ನು ತರುತ್ತೇವೆ ಜೊತೆಗೆ ನೀರಿನ ವ್ಯವಸ್ಥೆ ದೀಪದ ವ್ಯವಸ್ಥೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ದುರ್ದೈವ ೧೯೬೨ ರಿಂದ ೧೯೮೨ರ ವರೆಗೂ ಅಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಬೆಂಗಳೂರು ನಗರ ಮಾತ್ರ ಬೆಳೆಯುತ್ತಿದೆ ರಾಜ್ಯ ಸರ್ಕಾರ ಅನೇಕ ಸೌಕರ್ಯಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದೆ. ಇಲ್ಲೂ ತೊಂದರೆಗಳು ಇವೆ. ಆಗಬೇಕಾದ ಕಾರ್ಯಗಳು ಹಾಗೆಯೇ ಇವೆ. ಕಾರ್ಪೊರೇಷನ್‌ಗಳನ್ನು ಮಾಡಿದರೆ ಕೇಂದ್ರ ಸರ್ಕಾರದಿಂದ ರಸ್ತೆಗಳಿಗಾಗಿ, ನೀರಿನ ವ್ಯವಸ್ಥೆಗಾಗಿ, ದೀಪದ ವ್ಯವಸ್ಥೆಗೆ ಮತ್ತು ಇತರೆ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಬೇರೆ ರಾಜ್ಯಗಳವರು ಪಡೆದುಕೊಂಡಿದ್ದಾರೆ. ನಮ್ಮ ರಾಜ್ಯ ಕೇಂದ್ರದಿಂದ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿಲ್ಲ. ಕಾವೇರಿ ನೀರು ಯೋಜನೆಗೆ ಮಾತ್ರ ಹಣ ಕೇಂದ್ರದಿಂದ ಬಂದಿದೆ. ಅದು ಬೇರೆ ವಿಚಾರ. ಮೆಟ್ರೊಪಾಲಿಟನ್ ಸಿಟಿಗಳಾದ ದೆಹಲಿ, ಬಾಂಬೆ, ಕಲ್ಕತ್ತ ಈ ನಗರಗಳು ಕೇಂದ್ರ ಸರ್ಕಾರದಿಂದ ರಸ್ತೆ, ನೀರು, ದೀಪ ಇತರೆ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಎಂದು ಹೆಸರಂ ಮಾತ್ರ ಬದಲಾಯಿಸಿದರೆ ಏನು ಪ್ರಯೋಜನವಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ ನೀವು ಕಾರ್ಪೊರೇಷನ್ ಮಾಡಿದ ಮೇಲೆ ಆ ನಗರ ಅಭಿವೃದ್ಧಿಯಾಗಬೇಕಾದರೆ ಆದಕ್ಕನುಗುಣವಾಗಿ ಏನು ಹಣಕಾಸು ಒದಗಿಸಿದ್ದೀರಿ ? ಏನು ಯೋಜನೆಗಳನ್ನು ತರುತ್ತೀರಿ ? ಏನೇನು ಮಾಡುತ್ತೀರಿ ಎಂಬುದನ್ನು ನಮ್ಮ ಮುಂದೆ ಇಟ್ಟರೆ ಸರಿ. ಮಂತ್ರಿಗಳು ಕಾರ್ಪೊರೇಷನ್ ಮಾಡಿದ್ದೇವೆಂದು ಹೇಳಿಕೊಂಡರೆ ಪ್ರಯೋಜನವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಾಮಿನೇಷನ್ ಮಾಡುವ ಬಗ್ಗೆ ಒಂದು ಆರ್ಡಿನೆನ್ಸ್ ಹೊರಡಿಸಿ ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಅತ್ಯಂತ ಜರೂರಾಗಿ ಆರ್ಡಿನೆನ್ಸ್ ಮಾಡಿದರೂ ಅಧಿಕಾರ ಮಾಡಲಿಕ್ಕೆ ಸಾಧ್ಯವಿಲ್ಲ. ಆರ್ಡಿನೆನ್ಸ್‌ನ್ನು ಆತುರವಾಗಿ ಹೊರಡಿಸಿದ್ದೀರಿ, ಯಾವಾಗ ಆರ್ಡಿನೆನ್ಸ್ ಹೊರಡಿಸಬೇಕು ? ಒಂದು ಕಾರ್ಪೊರೇಷನ್‌ಗೆ ನಾಮಿನೇಷನ್ ಮಾಡಲು ಆರ್ಡಿನೆನ್ಸ್ ಬೇಕಾಗಿತ್ತೆ ? ಇಷ್ಟು ಆತುರ ಏತಕ್ಕೆ ? ಮಾನ್ಯ ಮಂತ್ರಿಗಳು ಸದಸ್ಯರ ನಾಮಿನೇಷನ್ ಮಾಡಿಲ್ಲವೆಂದು ಹೇಳಿದರು, ನಿಜವಾದ ಕಾರಣವೇನೆಂದರೆ ಹೈಕೋರ್ಟ್‌ನಲ್ಲಿ ಸ್ಟೇ ಇದೆ. ಹೈಕೋರ್ಟ್‌ನಲ್ಲಿ ಸ್ಟೇ ಇಲ್ಲದಿದ್ದರೆ, ಸದಸ್ಯರುಗಳ ಹೆಸರುಗಳ ಪಟ್ಟಿ ತಯ್ಯಾರು ಮಾಡಿಕೊಂಡಿದ್ದರು ಈಗಾಗಲೇ ನಾಮಿನೇಷನ್ ಆಗುತ್ತಿತ್ತು. ಗುಲ್ಬರ್ಗಾ, ಬೆಳಗಾಂ, ಮೈಸೂರುಗಳಿಂದ ಜನರು ಬಂದಿದ್ದಾರೆ, ಮಾನ್ಯ ಮುಖ್ಯಮಂತ್ರಿ ಮತ್ತು ಧರ್ಮಸಿಂಗ್‌ರವರನ್ನು ಕಂಡಿದ್ದಾರೆ, ಹೈಕೋರ್ಟ್‌ನ ಸ್ಟೇಯನ್ನು ವೆಕೇಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಆ ಪಟ್ಟಿಯಲ್ಲಿ ನಿಮ್ಮ ಹೆಸರೂ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಹೆಸರು ಇಲ್ಲ. ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಬೇಕಾದರೆ ನನ್ನನ್ನು ಕೇಳಬೇಕಾಗುತ್ತದೆ. ಆದರೆ ಆ ವಿಚಾರ ಬೇರೆ. ಆದಕ್ಕೂ ಮೊದಲು ನಮ್ಮ ಜಿಲ್ಲೆಯ ಕಾರ್ಪೊರೇಷನ್‌ಗೆ ಸದಸ್ಯರನ್ನು ನಾಮಕರಣ ಮಾಡುವುದಕ್ಕೆ ಬರುವುದಿಲ್ಲ. ಏನಿದ್ದರೂ ಹೊಸ ಕಾರ್ಪೊರೇಷನ್ ಆದಾಗ when a Corporation is constituted for the first time, there will have to be nominations. The Act contemplates to nominate corporators for the first three years. ಹೊಸದಾಗಿ ರಚನೆಯಾದಂಥ ಮುನಿಸಿಪಾಲಿಟಿ ಇರಬಹುದು, ಕಾರ್ಪೊರೇಷನ್ ಇರಬಹುದು, ಯಾವುದೇ ಸ್ಥಳೀಯ ಸಂಸ್ಥೆ ಇರಬಹುದು ಇಲ್ಲವೇ ಕೋ-ಆಪರೇಟಿವ್ ಸೊಸೈಟಿ ಇರಬಹುದು, ಇಂತಹ ಸಂದರ್ಭದಲ್ಲಿ ಪಾತ್ರ ಸದಸ್ಯರನ್ನು ೩ ವರ್ಷಗಳ ಕಾಲ ನಾಮಕರಣ ಮಾಡುವುದು ಸಹಜ. ಆದರೆ ಇಲ್ಲಿ ಏನಾಗಿದೆ ಎಂದರೆ, ಮೈಸೂರು, ಬೆಳಗಾಂ, ಮಂಗಳೂರು, ಗುಲ್ಬರ್ಗ ಇಲ್ಲೆಲ್ಲಾ ಕಳೆದ ೮ ವರ್ಷಗಳಿಂದ ಚುನಾವಣೆಯೇ ಆಗಿಲ್ಲ.

ಆಡಳಿತಾಧಿಕಾರಿಗಳೇ ಅಧಿಕಾರ ನಡೆಸುತ್ತಿದ್ದಾರೆ. ಆದ್ದರಿಂದ ಇಲ್ಲಿಲ್ಲಾ ತಾವು ಚುನಾವಣೆ ಮಾಡಿದ್ದರೆ, ಇಲ್ಲಿಗೆ ಆರಿಸಿ ಬಂದಂಥ ಸದಸ್ಯರನ್ನೇ ಈಗ ನಾಮಕರಣ ಮಾಡಬಹುದಾಗಿತ್ತು. ಆದರೆ ಚುನಾವಣೆಯನ್ನು ತಾವು ಮಾಡಲಿಲ್ಲ. ಮಾನ್ಯ ಧರ್ಮಸಿಂಗ್ ಅವರು ಇದೇ ಸಭೆಯಲ್ಲಿ ೧೯೮೧ರ ನವೆಂಬರ್ ತಿಂಗಳೊಳಗೆ ಚುನಾವಣೆ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಅದರಂತೆ ನಡೆದುಕೊಳ್ಳದ ಕಾರಣ ನಾನು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ. ಎಲ್ಲ ಮುನಿಸಿಪಾಲಿಟಿಗಳ ಮತ್ತು ಕಾರ್ಪೊರೇಷನ್‌ಗಳ ಚುನಾವಣೆಯನ್ನು ನವೆಂಬರ್ ೮೧ರೊಳಗೆ ಮಾಡುವುದಾಗಿ ತಾ : ೧೮-೬-೧೯೮೧ರಲ್ಲಿ ಇದೇ ಸಭೆಯಲ್ಲಿ ಹೇಳಿದ್ದಾರೆ. ಆ ದಿವಸ ಈ ಸಭೆಯಲ್ಲಿ ಇದೇ ವಿಚಾರದಲ್ಲಿ ಸಾಕಷ್ಟು ಚರ್ಚೆಯಾದ ಮೇಲೆ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದೇನೆಂದರೆ, ಚುನಾವಣೆ ನಡೆಸುವ ವಿಚಾರದಲ್ಲಿ ಸಾಕಷ್ಟು ಸದಸ್ಯರು ತಮ್ಮ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ, ಆದರೆ ಆ ಅನುಮಾನಕ್ಕೆ ಕಾರಣವಿಲ್ಲ, ನವೆಂಬರ್ ತಿಂಗಳಲ್ಲಿ ಚುನಾವಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಪ್ರೊಸೀಡಿಂಗ್ಸ್‌ನಲ್ಲಿದೆ.

SRI R. GUNDU RAO.—Even now, he stands by that. There are so many other difficulties also. He will never say that he would not conduct elections.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಇವರು ಚುನಾವಣೆ ನಡೆಸುವುದನ್ನು ಬಿಟ್ಟು ಕೆಲವು ಮುನಿಸಿಪಾಲಿಟಿಗಳನ್ನು ಕಾರ್ಪೊರೇಷನ್ ಮಾಡುವುದಕ್ಕೆ ಹೊರಟಿದ್ದಾರೆ. ತಮಗೆ ಬೇಕಾದವರನ್ನು ನಾಮಕರಣ ಮಾಡಲು ಈ ರೀತಿ ಮಾಡಿದ್ದಾರೆ. ಇದೊಂದು ಹೊಸ ತಂತ್ರ. ಮಾನ್ಯ ಮುಖ್ಯ ಮಂತ್ರಿಗಳು ಪದೇಪದೇ ಹೇಳುವುದೇನೆಂದರೆ, ಜನ ನಿರ್ಣಯ ಮಾಡಬೇಕು, ಜನಸಮ್ಮತಿಯಲ್ಲಿ ಇದ್ದಾರೆ ಎಂದು : ಹಾಗಿದ್ದರೆ ಈ ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಮೊದಲು ಚುನಾವಣೆ ಮಾಡಿ. ಆಗ ಜನರು ನಿಮ್ಮವರನ್ನೇ ಆರಿಸುತ್ತಾರೆ. ನಂತರ ಅಸೆಂಬ್ಲಿಗೆ ಚುನಾವಣೆ ನಡೆಯಲಿ ? ಆದರೆ ಇದಕ್ಕೆ ಇವರು ತಯಾರಿಲ್ಲ. ಏಕೆಂದರೆ, ಜನ ಇವರ ಜೊತೆ ಇಲ್ಲ ಎಂಬುದು ಇವರಿಗೆ ಗೊತ್ತಿದೆ. ಆದ್ದರಿಂದ ಇವುಗಳಿಗೆ ಚುನಾವಣೆ ನಡೆಸಲು ಇವರು ತಯಾರಿಲ್ಲ. ಮುಂದಿನ ವರ್ಷ ಅಸೆಂಬ್ಲಿ ಚುನಾವಣೆ ನಡೆಯುತ್ತದೆಂದು ಮುಖ್ಯ ಮಂತ್ರಿಗಳು ತಮ್ಮ ಪಕ್ಷದ ಸದಸ್ಯರಿಗೆ ಹೇಳಿದ್ದಾರೆ.

SRI R. GUNDU RAO.—While speaking, the hon. Member Sri Bommai said that mid-term polls will take place. Sir, elections will take place as usually because our term is upto February 1983. It may take place at that time, there is no need for elections in the middle. Why do you worry about it ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅತಿ ಜಾಗ್ರತೆಯಾಗಿ ಚುನಾವಣೆ ನಡೆಯುತ್ತವೆಂಬುದಂ ನಿಮಗೆ ಗೊತ್ತಿದೆ. ಈ ಕಾರಣದಿಂದಲೇ ಮುಂತ್ರಿಮಂಡಲವನ್ನು ತಾವು ವಿಸ್ತರಣೆ ಮಾಡಲಿಲ್ಲ. ಅದನ್ನು ಕೈಬಿಟ್ಟಿರಿ. ಚುನಾವಣೆ ಹತ್ತಿರ ಬರುತ್ತಿದೆ ಎಂದು ತಾವು ತಮ್ಮ ಕಾರ್ಯಕರ್ತರಿಗೆ ಹೇಳಿದ್ದೀರಿ. ಈ ರೀತಿ ಹೇಳಿಕೊಂಡು ತಾವು ಪುಂಗಿ ಊದಿದರೆ ನಿಮ್ಮ ಕಾರ್ಯಕರ್ತರೆಲ್ಲಾ ನಿಮ್ಮ ಸುತ್ತಲೇ ಇರಬೇಕಾಗುತ್ತದೆ. ತಾವು ಒಳ್ಳೆಯ ಸಮರ್ಥ ರೀತಿಯಿಂದ ಈ ಕೆಲಸ ಮಾಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಅಸೆಂಬ್ಲಿ ಡಿಜಾಲ್ವ್ ಆದರೆ ಸದಸ್ಯರಿಗೆ ಸಿಗುವಂತಹ ಪೆನ್‌ಷನ್ ಕೊಡುವುದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಡುವುದಿಲ್ಲ. ಈಗ ಅದಕ್ಕೆ ತಿದ್ದುಪಡಿ ಆಗಿದೆ. ಅದರ ಪ್ರಕಾರ ಅಸೆಂಬ್ಲಿ ಡಿಜಾಲ್ವ್ ಆದರೂ ಪೆನ್‌ಷನ್ ಸಿಗುತ್ತದೆ. ಅಸೆಂಬ್ಲಿ ಚುನಾವಣೆ ಯಾವಾಗ ಎಂದು ಮಾಜಿ ಮುಖ್ಯಮಂತ್ರಿಗಳು ಕೇಳುತ್ತಿದ್ದಾರೆ ; ಅದನ್ನಾದರೂ ತಾವು ಹೇಳುತ್ತೀರಾ ? ಅಸೆಂಬ್ಲಿ ಚುನಾವಣೆ ನಿಧಾನವಾಗಿ ನಡೆಯುವುದಾದರೆ, ಈ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗಾದರೂ ಚುನಾವಣೆ ಮಾಡಿ. ತಾವು ಚುನಾವಣೆ ಮಾಡದೆ ಸದಸ್ಯರನ್ನು ನಾಮಕರಣ ಮಾಡಲು ಹೊರಟರೆ, ಯಾರಯಾರದೋ ಒತ್ತಡ ತಮಗೆ ಬರುತ್ತದೆ. ಆಗ ಸರಿಯಾದಂಥ ಕಾರ್ಪೊರೇಟರುಗಳು ಬರುವುದಿಲ್ಲ. ಹಿಂದೆ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ರಚನೆ ಮಾಡಿದಾಗ ಸದಸ್ಯರನ್ನು ನಾಮಕರಣ ಮಾಡು

ವಂತಹ ಪರಿಪಾಠ ಇತ್ತು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಆದಕ್ಕೂ ಮೊದಲು ಯಾರು ಯಾರು ನಗರಸಭಾ ಸದಸ್ಯರು ಇದ್ದರು ಅಂತಹವರನ್ನೇ ನಾಮಕರಣ ಮಾಡಲಾಗಿತ್ತು. ಆದರೆ ಈಗ ನಾವು ಅನೇಕ ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಕಳದ ೭–೮ ವರ್ಷಗಳಿಂದ ಚುನಾವಣೆಯನ್ನೇ ಮಾಡಿಲ್ಲ.

ಶ್ರೀ ಆರ್. ಗುಂಡೂರಾವ್.—ಅಸೆಂಬ್ಲಿ ಚುನಾವಣೆಯಾದ ಮೇಲೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಿದ್ದರೆ ಯಾವ ತಿಂಗಳಲ್ಲಿ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅಸೆಂಬ್ಲಿ ಚುನಾವಣೆಯಾದ ಮೇಲೆ

ಶ್ರೀ ಎಸ್. ಆರ್. ಬೊಮ್ಮಾಯಿ.—ಜೂನ್ ತಿಂಗಳಲ್ಲಿ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆಗ ಮಳೆಗಾಲ ;

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಿದ್ದರೆ ಆಗಸ್ಟ್ ತಿಂಗಳಲ್ಲಿ ಮಾಡುತ್ತೀರಾ ? ಒಟ್ಟಿನಲ್ಲಿ ಈ ರೀತಿ ನಾಮಕರಣ ಮಾಡುವ ಪದ್ಧತಿಯನ್ನು ಕೈಬಿಟ್ಟು ಚುನಾವಣೆ ನಡೆಸಿ. ಚುನಾವಣೆಯಲ್ಲಿ ಯಾರು ಆರಿಸಿ ಬರುತ್ತಾರೋ ಬರಲಿ, ಇದನ್ನು ಬಿಟ್ಟು ಈಗಲೇ ನಾಮಕರಣ ಮಾಡುವುದಾದರೆ, ಅದು ಪ್ರಜಾ ಪ್ರಭುತ್ವದ ನೀತಿಗೆ ಸರಿಹೋಗುವುದಿಲ್ಲ. ಆದಕಾರಣ ಈ ಒಂದು ನೀತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಮಾಡುತ್ತೇನೆ.

ಶ್ರೀ ಎಂ. ಸಿ. ನಾನಯ್ಯ (ಮಡಿಕೇರಿ).—ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಕೆಲವು ಮುನಿಸಿಪಾಲಿಟಿಗಳನ್ನು ಕಾರ್ಪೊರೇಷನ್‌ಗಳನ್ನಾಗಿ ಮಾಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಹೊಸ ಕಾರ್ಪೊರೇಷನ್‌ಗಳಿಗೆ ನಾಮಕರಣ ಮಾಡುವಂತಹ ಪದ್ಧತಿ ಏನಿದೆ, ಇದೊಂದು ಶನಿ ಪದ್ಧತಿ ಎಂದು ನಾನು ಹೇಳುತ್ತೇನೆ. ಮುಂಬೈ ಕರ್ನಾಟಕದಲ್ಲಿ ಮೊದಲ ಸಲ ಕಾರ್ಪೊರೇಷನ್ ಎಂದು ಮಾಡಿದಾಗ ಇಲ್ಲವೇ ಮೊದಲ ಸಲ ಮುನಿಸಿಪಾಲಿಟಿ ಎಂದು ಮಾಡಿದಾಗ ಅದಕ್ಕೆ ಸದಸ್ಯರನ್ನು ನಾಮಕರಣ ಮಾಡಲಾಯಿತು ಎಂದು ಮಾನ್ಯ ಬೊಮ್ಮಾಯಿ ಅವರು ಹೇಳಿದರು. ಆದರೆ ಕರ್ನಾಟಕ ರಾಜ್ಯದಲ್ಲಿ ಮೊದಲ ಸಲ ಪಂಚಾಯಿತಿಗಳನ್ನು ರಚನೆ ಮಾಡಿದಾಗ ಮತ್ತು ತಾಲ್ಲೂಕ್ ಬೋರ್ಡುಗಳನ್ನು ರಚನೆ ಮಾಡಿದಾಗ ಬಹುಶಃ ಆ ಕಾಲದಲ್ಲಿ ಸದಸ್ಯರನ್ನು ನಾಮಕರಣ ಮಾಡಲಿಲ್ಲ.

೩–೩೦ ಪಿ. ಎಂ.

ಪ್ರತಿ ಪಂಚಾಯಿತಿಯಲ್ಲೂ, ಪ್ರತಿ ಮುನಿಸಿಪಾಲಿಟಿಯಲ್ಲೂ ಚುನಾವಣೆ ನಡೆಸಿದರೆ ಆವಾಗ ಚುನಾಯಿತ ಪ್ರತಿನಿಧಿಗಳು ಬಂದು ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆ. ಅದು ಬಿಟ್ಟು ಈವಾಗ ತಾವು ಅಧಿಕಾರಿಗಳನ್ನು ನಾಮಿನೇಷನ್ ಮಾಡುವುದರ ಉದ್ದೇಶವಾದರೂ ಏನು ಹೇಳುತ್ತೀರಾ ? ತಾವು ಈ ಬಿಲ್‌ನಲ್ಲಿ ಏನು ಹೇಳಿದ್ದೀರಾ ಎಂದರೆ It is considered necessary that Government should have power to nominate the first councillors, Mayor and Deputy Mayor for the newly constituted Corporation so as to place them on a firm footing" ಎಂದು. ಕೌನ್ಸಿಲರ್ಸ್ ಅನ್ನು ನೇಮಕ ಮಾಡಬೇಕಾದರೆ ಯಾರನ್ನು ಮಾಡುತ್ತೀರಾ? ಯಾರನ್ನಾದರೂ ಕೌನ್ಸಿಲರ್‌ನ್ನಾಗಿ ನಾಮಿನೇಟ್ ಮಾಡಬೇಕಾದರೆ ಅಧಿಕಾರಿಗಳನ್ನು ನೇಮಕ ಮಾಡುವುದಿಲ್ಲ, ಅನ್ನುವ ತೀರ್ಮಾನಕ್ಕೆ ಬಂದರೆ ಏಂತಾರನ್ನು ಮಾಡುತ್ತೀರಾ? ಆ ಕ್ಷೇತ್ರದಲ್ಲಿ ಯಾರು ಚೆನ್ನಾಗಿ ಕೆಲಸ ಮಾಡಿ ಬಹಳ ಅನುಭವ ಹೊಂದಿ ಎಲ್ಲ ಮತದಾರರ ಕಷ್ಟಸುಖಗಳನ್ನು ತಿಳಿದು ಕೊಂಡಿರುವವನನ್ನು ನಾಮಕರಣ ಮಾಡುತ್ತೀರಾ ಹೇಗೆ? ಇದರಲ್ಲಿ Mayor and Deputy Mayor for the newly constituted Corporation so as to place them on a firm footing ಅಂತ ಹೇಳಿದ್ದೀರಲ್ಲಾ ಇದಕ್ಕೆ ಆಧಾರ ಏನು? ಯಾರನ್ನು ಕೌನ್ಸಿಲರ್ ಆಗಿ ನಾಮಿನೇಟ್ ಮಾಡುತ್ತೀರಾ? ಆದುದರಿಂದ ನಾನು ಹೇಳುವುದು ತಾವು ಚುನಾವಣೆ ನಡೆಸಿ, ಚುನಾಯಿತ ಪ್ರತಿನಿಧಿಗಳು ಬರುತ್ತಾರೆ, ಚೆನ್ನಾಗಿ ಆಡಳಿತವನ್ನು ನಡೆಸಿಕೊಂಡು ಹೋಗುತ್ತಾರೆ. ಹೀಗೆ ಮಾಡಿದರೆ ಇದು ಫರ್ಮ್ ಫುಟಿಂಗ್‌ಗೆ ಆಧಾರವಾಗುವುದಿಲ್ಲವೇ ? ನೀವು ನಾಮಕರಣ ಮಾಡಿದರೆ ಮಾತ್ರ ಫರ್ಮ್ ಫುಟಿಂಗ್ ಅಂತ ಹೇಳುತ್ತೀರಾ? ಮಾನ್ಯ ಸಚಿವರಾದ ಧರ್ಮಸಿಂಗ್‌ರವರುಇದಕ್ಕೆ ಯಾವ ಆಧಾರವೂ ಕೊಡದೆ to have

firm footing in the initial stages ಅಂತ ಹೇಳಿದ್ದಾರಲ್ಲಾ ಹೇಗೆ? ನಾವು ಹೀಗೆ ತಿಳಿದುಕೊಳ್ಳಬೇಕಾಗುತ್ತದೆ. ನಿಮ್ಮಲ್ಲಿ ನಾನ್ ಆಫಿಷಿಯಲ್ಸ್ ಯಾರಾದರೂ ಇದ್ದರೆ ಅವರು ಚುನಾವಣೆಯಾಗಿ ಮತ್ತೆ ಬರುವುದಿಲ್ಲ ಅನ್ನುವುದನ್ನೇದರೂ ಗಮನದಲ್ಲಿಟ್ಟುಕೊಂಡು ಇದನ್ನು ಮಾಡುತ್ತಿದ್ದಿರೋ ಏನೋ ಅನ್ನುವುದನ್ನು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ನಾನು ಹೇಳುವುದು ಏನೆಂದರೆ ಈ ಒಂದು ನಾಮಕರಣ ಪದ್ಧತಿ ಏನು ಇದೆ ಅದನ್ನು ಯಾವುದೇ ಸಂಸ್ಥೆಗಾಗಲಿ ಮಾಡುವುದಾದ್ದನ್ನು ನಿಲ್ಲಿಸಬೇಕು ಎಂದು. ನಾವು ಎರಡು ವರ್ಷದಿಂದಲೂ ಕೂಡ ಮಾನ್ಯ ಮಂತ್ರಿಗಳಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಈ ಸ್ಥಳೀಯ ಸಂಸ್ಥೆಗಳಲ್ಲಿ ನಾಮಕರಣ ಮಾಡುವ ಪದ್ಧತಿ ಇರಕೂಡದು ಅದಕ್ಕೆ ನಾವೆಲ್ಲಾ ಸಹಕಾರ ಕೊಡುತ್ತೇವೆ ಎಂದು ಈ ವೇದಿಕೆಯಲ್ಲಿ ಹೇಳುತ್ತಲೇ ಬಂದಿದ್ದೇವೆ. ಈ ನಾಮಿನೇಟ್ ಮಾಡುವ ಪದ್ಧತಿ ಏನು ಇದೆ ಇದು ಒಂದು ಅನಿಷ್ಟ ಪದ್ಧತಿ ಇದನ್ನು ನಿಲ್ಲಿಸಬೇಕೆಂದು ಆಗಾಗ್ಗೆ ಹೇಳುತ್ತಲೇ ಇದ್ದೇವೆ. ಹೀಗೆ ಮಾಡುವುದರಿಂದ ಏನಾಗುತ್ತದೆ ಎಂದರೆ ೧೦ ಸ್ಥಾನಕ್ಕೆ ೧೫೦ ಅರ್ಜಿಗಳು ಬರುತ್ತದೆ ಅದರಲ್ಲಿ ಯಾರನ್ನು ನಾಮಕರಣ ಮಾಡಬೇಕು ಅನ್ನುವ ಪ್ರಶ್ನೆ ಬರುತ್ತದೆ. ೧೫೦ ಅರ್ಜಿಗಳು ಬಂದಾಗ ಬಹುಶಃ ಅವರಿಗೇ ಬೇಕಾದ ವ್ಯಕ್ತಿಗಳನ್ನೋ ಅಥವಾ ಇವರಿಗೆ ಬೇಕಾದ ವ್ಯಕ್ತಿಗಳನ್ನೋ ನಾಮಕರಣ ಮಾಡಬೇಕಾಗುತ್ತದೆ. ಯಾವುದೇ ತಿ ಮಾಡಿದರೂ ಪಕ್ಷದಲ್ಲಿ ಒಂದು ಒಡಕು ಬರುವುದಕ್ಕೆ ಕಾರಣವಾಗುತ್ತದೆ. ಅದುದರಿಂದ ಈ ಒಂದು ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಬೇಕೆಂದು ಮಾನ್ಯ ಮಂತ್ರಿಗಳಲ್ಲೂ, ಮುಖ್ಯಮಂತ್ರಿಗಳಲ್ಲೂ ಎರಡು ವರ್ಷದಿಂದಲೂ ಹೇಳುತ್ತಾ ಬಂದಿದ್ದೇವೆ. ಮತ್ತೇನು ಹೆ ಳಿದ್ದೇವೆ ಎಂದರೆ ಇದನ್ನು ನಿಷೇಧಿಸುವುದಕ್ಕೆ ಒಂದು ಶಾಸನದ ಮುಖಾಂತರವಾದರೂ ತಂದು ಮಾಡಬೇಕು ಎಂದು. ಈ ಒಂದು ಒನ್ನೆಲೆಯಲ್ಲಿ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡು ಒಳ್ಳೆಯದು. ಮೇಯರ್, ಡೆಪ್ಯೂಟಿ ಮೇಯರ್ ಮತ್ತು ಕೌನ್ಸಿಲರ್ಸ್ ಇವರಿಗೆ ಚುನಾವಣೆಗೆ ಮುಂಚೆ ಅಧಿಕಾರ ಕೊಡ.ವುದಕ್ಕೆ ಕಾರಣ ಏನು ಹೇಳಿದ್ದೀರಿ ಎಂದರೆ to have firm footing in the initial stage ಅಂತ ಹೇಳಿದ್ದೀರಾ. ಇದಕ್ಕೆ ನಾಮಕರಣ ಮಾಡುವವರು ಯಾರು ? ನೀವು ಈ ರೀತಿಯಲ್ಲಿ ನಾಮಕರಣ ಮಾಡಿದ ಮಾತ್ರಕ್ಕೇನೇ ಅವರನ್ನು ಫರ್ಮ್ ಫುಟಿಂಗ್ ಅಂತ ಹೇಳುವುದಕ್ಕಾಗುತ್ತದೆಯೇ ? ಚುನಾವಣೆ ಮಾಡಿ ಚುನಾಯಿತ ಪ್ರತಿನಿಧಿಗಳು ಬಂದು ಆಡಳಿತ ನಡೆಸಿದರೆ ಅದು ಫರ್ಮ್ ಫುಟಿಂಗ್ ಆಗುವುದಿಲ್ಲವೇ ಶ್ರೀ ಎಸ್. ಆರ್. ಬೊಮ್ಮಯಿಯವರು ಮುಂದೆ ಕೌನ್ಸಿಲರ್ ಆಗುತ್ತಾರೋ ಇಲ್ಲವೋ ಅಂತ ಈಗಲೇ ತಿಳಿದು ಮಾಡಿ, ಬಹಳ ಒಳ್ಳೆಯದು. ಈಗಾಗಲೇ ಎಲ್ಲಾ ಕಾರ್ಪೊರೇನ್ಸ್‌ಗಳನ್ನೂ ಮತ್ತು ಬಹಳ ಮುನಿಸಿಪಾಲಿಟಿಗಳನ್ನೂ ಸೂಪರ್‌ಸೀಡ್ ಮಾಡಿದ್ದೀರಿ. ಆದುದರಿಂದ ಹಳೇ ಕೌನ್ಸಿಲರ್ಸ್ ಮತ್ತು ಹಳೇ ಕಾರ್ಪೊರೇಟರ್ಸ್ ಚುನಾವಣೆಗೆ ನಿಂತರೂ ಕೂಡ ಬರುವುದಿಲ್ಲ ಎಂದು ಪರೋಕ್ಷವಾಗಿ ಬರುವುದಕ್ಕೆ ಈರೀತಿ ಮಾಡುತ್ತೀರಾ ? ಅಥವಾ ಪ್ರಜಾಪ್ರಭುತ್ವ ತತ್ವದಿಯ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡಬೇಕು ಎನ್ನುವುದು ನಿಮ್ಮ ಮನಸ್ಸಿನಲ್ಲಿ ಇದೆಯೇ ಇಲ್ಲವೇ? ಚುನಾವಣೆ ನಡೆಸಿ ಚುನಾಯಿತ ಪ್ರತಿನಿಧಿಗಳು ಬಂದರೆ ಆ ಕ್ಷೇತ್ರದ ಮತದಾರರಿಗೆ ಹೆಚ್ಚಿನ ಸೌಲಭ್ಯಗಳನ್ನು ಉಂಟು ಮಾಡಬಹುದು. ಅವರಿಗೆ ಆ ಕ್ಷೇತ್ರದಲ್ಲಿ ಹೆಚ್ಚಿನ ಅನುಭವ ಇರುವುದರಿಂದ ಅನುಕೂಲವಾಗುತ್ತದೆ. ಅದು ಬಿಟ್ಟು ತಂತಾನೆ ಯಾಗಿ ಈ ಬಿಲ್ ತಂದು ನಾಮಕರಣ ಮಾಡುವ ಪದ್ಧತಿ ತಂದಿದ್ದೀರಲ್ಲಾ ಇದು ಸರಿಯೇ ? ತರಾತುರಿಯಾಗಿ ಸಂಗ್ರೀವಾಜ್ಞೆ ತರುವ ಅವಶ್ಯಕತೆ ಯಾರಲ್ಲೂ ಏನಿತ್ತು. ಅಥವಾ ಇದರಲ್ಲಿ ಏನೋ ಒಂದು ಉದ್ದೇಶ ಇರಬಹುದು. ನಾನು ಮೊದಲೇ ಬೆಳಿದ ಹಾಗೆ ನಾವು ಮುಂದೆ ಬರುವುದಿಲ್ಲ ಅನ್ನುವ ಒಂದು ಸಂಶಯದಿಂದಲಾದರೂ ಈಗ ತರಲಾಗಿರುವ ಜನರನ್ನು ಸಂತೃಪ್ತಿಗೊಳಿಸುವುದಕ್ಕೊಸ್ಕರ ಇದನ್ನು ಉಪಯೋಗಿಸಿಕೊಳ್ಳುವ ಭಾವನೆ ಬಂದಿದೆಯೋ ಏನೋ ನನಗೆ ಗೊತ್ತಿಲ್ಲ. ಇದು ಪ್ರಜಾಪ್ರಭುತ್ವ ತತ್ವದ ವಿರುದ್ಧವಾದದ್ದು ಎಂದು ಹೇಳುತ್ತೇನೆ.

ಶ್ರೀ ಮೊಹಿದ್ದೀನ್.—ಅಲ್ಲಿಗೆ ಲೆಜಿಸ್ಲೇಚರ್ ಅನ್ನು ಮೂರನ್ನೂ ನಾಮಕರಣ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಅವರಿಗೆ ನಾನು ಹೇಳುತ್ತೇನೆ. ಪ್ರಜಾಪ್ರಭುತ್ವ ಚೆನ್ನಾಗಿ ಬೆಳೆಸಬೇಕಾದರೆ ನೊಡಲು ಅವರು ಹೋಗತಕ್ಕಂಥಾ ಮಾರ್ಗ ಒಳ್ಳೆಯದಾಗಿರಬೇಕು. ಇನ್ನೊಬ್ಬರಿಗೆ ಅನುಕರಣೆ ಮಾಡುವವರು, ತಾವು ಅನುಕರಣೆಯಾಗಿ ಕೆಲಸ ಮಾಡಬೇಕು. ಹಾಗೇನಾದರೂ ಮೊಹಿದ್ದೀನ್‌ರವರು ಮಾಡಿದ್ದಾರೆಯೇ ? ಮೊದಲನೇ ಪೆಜ್ಜೆ ಹೇಳಬೇಕಾದರೆ ೧೯೭೮ ರಲ್ಲಿ ನೀವು ಇಲ್ಲಿ ಇದ್ದ ಮಧ್ಯದಲ್ಲಿ ಬೇರೆ ಕಡೆ ಹೋಗಿದ್ದೀರಾ ? ಪ್ರಜಾಪ್ರಭುತ್ವ ತತ್ವದಂತೆ ಇದುವರೆಗೂ ತಾವು

ಪರಿಪಾಲನೆ ಮಾಡಿಕೊಂಡು ಬಂದಿದ್ದೀರಾ ? ತಾವು ಮೊದಲು ಬೇರೆ ಪಕ್ಷದಲ್ಲಿ ಇದ್ದು ಈಗ ಆ ಪಕ್ಷಕ್ಕೆ ಹೋಗಿದ್ದೀರಿ. ಈ ಪ್ರಜಾಪ್ರಭುತ್ವದಲ್ಲಿ ಮೊದಲು ಯಾವ ಪೆಜ್ಜೆ ಇಟ್ಟಿದ್ದರೊ ಆ ಹೆಜ್ಜೆಯಲ್ಲೇ ನಿಂತು ಆ ಒಂದು ತತ್ವದಂತೆ ಇದುವರೆಗೂ ಯಾರೂ ನಡೆದುಕೊಂಡು ಬಂದಿಲ್ಲಾ. ಯಾರು ಅಧಿಕಾರದಲ್ಲಿರುತ್ತಾರೋ ಅವರ ಕಡೆಗೆ ಬಂದು ಸೇರಿಬಿಡುತ್ತಾರೆ. ಇಲ್ಲದೇ ಹೋದರೆ ಯಾರು ಹೋಗುವುದಿಲ್ಲ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ. ಈ ಪ್ರಜಾಪ್ರಭುತ್ವದ ಒಂದು ಹಿನ್ನೆಲೆಯಲ್ಲಿ ಸರಿಯಾದ ಒಂದು ಹಾದಿಯಲ್ಲಿ ಪ್ರಜಾಪ್ರಭುತ್ವದ ತತ್ವದಂತೆ ನಡೆಯಬೇಕು ಎಂದು ಹೇಳುತ್ತೇನೆ. ಹಾಗೆ ಮಾಡದೆ ಅಂದರೆ ಚುನಾವಣೆ ನಡೆಸದೆ ಈ ರೀತಿಯಾಗಿ ಕಾರ್ಪೊರೇಷನ್ಸ್‌ಗೆ ಮುನಿಸಿಪಾಲಿಟಿಗಳಿಗೆ ನಾಮಕರಣ ಮಾಡುವಂಥಾದ್ದು ಸರಿಯಾದುದಲ್ಲ. ಒಂದು ವೇಳೆ ಹಾಗೆ ಮಾಡಿದರೆ ಇನ್ನಷ್ಟು ಹೊಲಸಾಗುತ್ತದೆ. ಆರೀತಿಯಾಗಿ ಹೊಲಸು ಎಬ್ಬಿಸುವ ಕೆಲಸ ಮಾಡಬೇಡಿ ಎಂದು ಹೇಳುತ್ತೇನೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ ಈ ಅಧಿವೇಶನ ನಡೆಯುವುದಕ್ಕಿಂತ ಮುಂಚಿತವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತೇವೆಂದು ಹೇಳಿದ್ದು ಪತ್ರಿಕೆಗಳಲ್ಲೂ ಬಂದಿದೆ. ಅದನ್ನು ನೋಡಿದ ತಕ್ಷಣ ಕೆಲವರು ಹೊಸ ಹೊಸ ಸೂಟ್ ಕೋಟನ್ನು ಹೊಲಿಸಿಕೊಂಡು ರೆಡಿ ಆದರು. ಆದರೆ ಇದುವರೆಗೂ ಮಂತ್ರಿಮಂಡಲ ವಿಸ್ತರಣೆ ಯಾಗಲಿಲ್ಲಾ. ಕಳೆದ ಒಂದು ವರ್ಷದಿಂದಲೂ ಮಂತ್ರಿಮಂಡಲ ವಿಸ್ತರಣೆ ಮಾಡುತ್ತೇನೆಂದು ಅವರು ಹೇಳಿಕೊಂಡೇ ಬರುತ್ತಿದ್ದಾರೆ. ಹಾಗೆಯೇ ಕೆಲವರು ನಮಗೆ ಮಂತ್ರಿ ಪದವಿ ಸಿಗುತ್ತದೆ ನಮಗೆ ಮಂತ್ರಿ ಪದವಿ ಸಿಗುತ್ತದೆ ಎಂದು ಬಹಳ ಕಾತುರಪಡುತ್ತಿದ್ದರು. ಇದುವರೆಗೂ ಆಗಲಿಲ್ಲಾ. ಹಾಗೆಯೇ ಈವಾಗ ನಾಮಿನೇಟ್ ಮಾಡುತ್ತೇವೆ ಅನ್ನುವ ಒಂದು ಬಿಲ್ ಏನು ತಂದಿದ್ದೀರೋ ಅದನ್ನೇ ಕೇಳಿಕೊಂಡು ನಾನು ಮೇಯರ್ ಆಗಬಹುದು, ನಾನು ಡೆಪ್ಯೂಟಿ ಮೇಯರ್ ಆಗಬಹುದು ನಾನು ಕೌನ್ಸಿಲರ್ ಆಗಬಹುದು ಎಂದು ಹೊಲಿಸಿಕೊಂಡಾರು. ಅಂಥಾವರಿಗೆ ನೀವು ಅವಕಾಶ ಮಾಡಿಕೊಡದೇ ಹೋದರೆ ನಿಮ್ಮ ಮೇಲೆ ಅಪವಾದ ಬರುತ್ತದೆ. ಈ ಅಪವಾದ ಬರುತ್ತದೆ ಎಂದು ಏನಾದರೂ ನಿಮಗೆ ಸಂಶಯ ಬಂದಿದೆಯೇ ? ಪ್ರಜಾಪ್ರಭುತ್ವ ತತ್ವಗಳನ್ನು ಮತ್ತು ಆದರ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದರೆ, ಈ ನಾಮಕರಣ ಮಾಡುವ ಪದ್ಧತಿಯನ್ನು ಕೈಬಿಟ್ಟು ಚುನಾವಣೆಯನ್ನು ನಡೆಸಬೇಕು ಎಂದು ಹೇಳುತ್ತೇನೆ. ಆದುದರಿಂದ ಚುನಾವಣೆಯನ್ನು ಯಾವಾಗ ನಡೆಸುತ್ತೀರಿ ಅನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೀರಾ ? ಎಲ್ಲಾ ಕಾರ್ಪೋರೇಷನ್‌ಗಳಿಗೂ ಎಲ್ಲಾ ಮುನಿಸಿಪಾಲಿಟಿಗಳಿಗೂ ಒಂದು ನಿರ್ದಿಷ್ಟವಾದ ಸಮಯದಲ್ಲಿ ಚುನಾವಣೆ ನಡೆಸುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ? ಈವೊತ್ತಿನ ಪರಿಸ್ಥಿತಿಯಲ್ಲಿ ಯಾವ ಕಾರ್ಪೋರೇಷನ್ಸ್‌ಗೂ ಯಾವ ಮುನಿಸಿಪಾಲಿಟಿಗಳಿಗೂ ಗೌರವ ಮರ್ಯಾದೆ ಇಲ್ಲದೇ ಇದ್ದ ಹಾಗೆ ಇದೆ. ತಮಗೆ ಹೇಳಬೇಕು ಎಂದರೆ ಕೊಡಗು ಜಿಲ್ಲೆಯ ಮಡಕೇರಿ ಮುನಿಸಿಪಾಲಿಟಿ ಕೇವಲ ೨೦ ಸಂಖ್ಯೆ ಇರತಕ್ಕಂಥಾ ಮುನಿಸಿಪಾಲಿಟಿ. ಅಲ್ಲಿ ಎಷ್ಟು ಅವ್ಯವಹಾರ ನಡೆದಿದೆ ಅನ್ನುವುದನ್ನು ನೋಡಿದರೆ ಬಹಳ ಬೇಸರವಾಗುತ್ತದೆ ಅಲ್ಲಿಗೆ ಯಾವ ಅಧಿಕಾರಿಯೇ ಬರಲಿ ಅದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯ ಅಧಿಕಾರವನ್ನು ಅಡ್ಮಿನಿಸ್ಟ್ರೇಟರ್ ಅವರೇ ನಡೆಸಿಕೊಂಡು ಬರುತ್ತಿದ್ದಾರೆ.ಹಾಗಿದ್ದರೆ ಮುನಿಸಿಪಾಲಿಟಿಯ ಮರ್ಯಾದೆ ಗೌರವ ಏನಾಯಿತು?ಕೊನೆಯದಾಗಿ ಹೇಳುವುದೇನೆಂದರೆ ಹೊಸದಾಗಿ ಕಾರ್ಪೋರೇಷನ್ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಮೇಯರ್ ಡೆಪ್ಯೂಟಿ ಮೇಯರ್ ಕೌನ್ಸಿಲರ್ಸ್ ಇವರನ್ನು ಆ ಸ್ಥಾನಗಳಿಗೆ ನಾಮಿನೇಟ್ ಮಾಡುವ ಪದ್ಧತಿ ಏನು ಇದೆ ಅದು ಆ ಸಂಸ್ಥೆಗೆ ಅಪಚಾರ ಮಾಡಿದಂತಾಗುತ್ತದೆ, ಆ ರೀತಿ ಅಪಚಾರ ಮಾಡಕೂಡದು, ಅದನ್ನು ನಿಷೇಧಿಸುವುದಕ್ಕೆ ಒಂದು ಶಾಸನದ ಮಂಜೂರಾತಿ ಏನಾದರೂ ತಂದು ಕೈಬಿಡಬೇಕೆಂದು ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ)....ಮಾನ್ಯ ಉಪಾಧ್ಯಕ್ಷರೇ, ನಮ್ಮ ನಗರಾಡಳಿತ ಸಚಿವರು ನಮ್ಮ ಮುಂದೆ ಏನು ಒಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಹಾಗೆಯೇ ಈಗಾಗಲೇ ನಮ್ಮ ಮಾನ್ಯ ಸ್ನೇಹಿತರು ಹೇಳಿರತಕ್ಕಂಥಾ ಮಾತಿಗೆ ನಾನೂ ಸಹ ಕೆಲವೊಂದು ವಿಷಯಗಳನ್ನು ಬೇಧಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಚಿವರು ಇದನ್ನು ಮಂಡನೆ ಮಾಡಿದ ಕಾಲದಲ್ಲಿ ಏನು ಹೇಳಿದರು ಎಂದರೆ ಈ ನಾಮಿನೇಷನ್ ಪದ್ಧತಿ ಶತಮಾನದ ಅದಿಯಿಂದಲೂ ನಡೆದುಕೊಂಡು ಬರುತ್ತಿದೆ ಅಂತ ಹೇಳಿದರು. ಅವರಿಗೆ ಕಾನೂನು ಗೊತ್ತಿದೆ, ಇದಕ್ಕೆ ವಿರೋಧವೂ ಬರುತ್ತಿದೆ ಅನ್ನುವುದು ಗೊತ್ತಿದೆ. ಆದರೂ ಸಹ ಇದನ್ನು ಪೀಠಿಕಾ ಪ್ರಕರಣವಾಗಿ

ನಮ್ಮ ಮುಂದೆ ಇಟ್ಟಿದ್ದಾರೆ. ಯಾವುದಾದರೂ ಹೊಸದಾಗಿ ಕಾರ್ಪೊರೇಷನ್ ಮಾಡಿದರೆ ಅದಕ್ಕೆ ನಾಮಿನೇಷನ್ ಮಾಡಬೇಕಾಗುತ್ತದೆ ಎನ್ನುವ ಒಂದು ಪಾತನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೇ, ಆ ಪಾತಿನ ಚೌಕಟ್ಟಿನಲ್ಲಿ ನಾವು ಅದನ್ನು ನೋಡಬೇಕಾಗುತ್ತದೆ. ಹೊಸದಾಗಿ ಏನಾದರೂ ಮಾಡುವುದು ಎಂದರೆ ನಮ್ಮ ಇಡೀ ಸಮಾಜಕ್ಕೆ, ನಮ್ಮ ವ್ಯವಸ್ಥೆಗೆ, ನಮ್ಮ ಈ ಸರ್ಕಾರಕ್ಕೆ ಹೊಸದೊಂದನ್ನು ನಾವು ಜೋಡಿಸಿಕೊಂಡಾಗ ಎನ್ನುವ ಅರ್ಥದಲ್ಲಿ ಅದನ್ನು ನೋಡಬೇಕೇ ಹೊರತು ಪ್ರತಿಸಾರಿ ಮಾಡಿದಾಗಲೂ ಕೂಡ ಮೊದಲಸಾರಿ ಆ ಊರಿನಲ್ಲಿ ಮಾಡಿದಕೂಡಲೇ ಅದಕ್ಕೆ ನಾಮಕರಣ ಮಾಡಬೇಕು ಎನ್ನುವುದು ಇದೊಂದು ತತ್ವ ಆಗ ವುದಕ್ಕೆ ಸಾಧ್ಯವಿಲ್ಲ. ಈಗ ಈ ಮುನಿಸಿಪಾಲಿಟಿ ಗಳಾಗಲೀ, ಕಾರ್ಪೊರೇಷನ್ ಗಳಾಗಲೀ, ನಮ್ಮ ದೇಶಕ್ಕೆ, ಈ ನಮ್ಮ ಸಮಾಜಕ್ಕೆ ಹೊಸದಾಗಿ ಬಂದಂಥ ವಿಚಾರವಲ್ಲ ಇದು. ಈ ವಿಚಾರ ಹೊಸದಾದಾಗ ಅದನ್ನು ಹೇಗೆ ನಿರ್ವಹಿಸಬೇಕು ಎನ್ನುವ ಸೂತ್ರಗಳು ನಮಗೆ ಇನ್ನೂ ಕರಗತವಾಗಿಲ್ಲದೇ ಇರುವ ಪರಿಸ್ಥಿತಿಯಲ್ಲಿ ದೇಶದಲ್ಲಿ ಸ್ವಲ್ಪ ತಜ್ಞತೆ ಇರತಕ್ಕಂಥವರಿಗೆ, ತಿಳಿವಳಿಕೆ ಇರತಕ್ಕಂಥವರಿಗೆ ಮೊದಲು ಮಾಡಲು ಅವರಿಗೆ ಅವಕಾಶ ಕೊಟ್ಟು ಅವರು ಹೇಗೆ ನಿರ್ವಹಿಸಿದರು ಎಂಬ ಮೇಲ್ಪಂಕ್ತಿ ಮೇಲೆ ಮುಂದೆ ಚುನಾವಣೆಗಳ ಮುಖಾಂತರ ಅಂತಹ ಜನಗಳು ಬರಲಿ ಎಂದು ಹೇಳತಕ್ಕಂಥಾದ್ದು ಸಿದ್ಧಾಂತವಾಗಬಹುದು ಅಥವಾ ತಾತ್ವಿಕ ನಿಲುವು ಆಗಬಹುದು. ನಾವು ಹೊಸದಾಗಿ ಕಾರ್ಪೊರೇಷನ್ ಮಾಡಿದಕೂಡಲೇ ನಾಮಿನೇಟ್ ಮಾಡಬೇಕು ಎನ್ನತಕ್ಕಂಥಾದ್ದು ಖಂಡಿತವಾಗಿಯೂ ಸರಿಯಲ್ಲ. ನೀವೇನಾದರೂ ಹಾಗೆ ಭಾವಿಸುವುದಕ್ಕೆ ಹೊರಟರೆ ನಾನು ಹೇಳಿದೆ ಸಿದ್ಧಾಂತಕ್ಕೆ ಅದು ಹೊಂದುವುದಿಲ್ಲ ಮತ್ತು ಅದು ಸಿದ್ಧಾಂತವಾಗುವುದಕ್ಕೆ ಸಾಧ್ಯವೂ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕಾರ್ಪೊರೇಷನ್ ಅನ್ನು ಹೇಗೆ ನಡೆಸಬೇಕು ಎನ್ನತಕ್ಕಂಥಾದ್ದು ಅದಕ್ಕೆ ಚುನಾವಣೆ ಮಾಡಿದರೆ ಚುನಾವಣೆಯಲ್ಲಿ ಆರಿಸಿ ಬರತಕ್ಕಂಥ ಪ್ರತಿನಿಧಿಗಳಿಗೆ ತಕ್ಷಣ ನಡೆಸುವುದಕ್ಕೆ ಗೊತ್ತಿರುತ್ತದೆ. ಅದು ಗೊತ್ತಿಲ್ಲದೇ ಇರತಕ್ಕಂಥ ವಿಚಾರವೇನೂ ಅಲ್ಲ. ಈ ಸರ್ಕಾರಗಳಿಗೆ ತಕ್ಷಣ ಚುನಾವಣೆಗಳು ಆಗಿ ಮಂತ್ರಿಮಂಡಲಗಳು ಬಂದು ಇವತ್ತಿನವರೆಗೂ ಯಾವು ದನ್ನೂ ಮಾಡದೇ ಇದ್ದವರು ತಕ್ಷಣ ಮಂತ್ರಿಗಳಾಗಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುವುದಾದರೆ ಒಂದು ಕಾರ್ಪೊರೇಷನ್‌ಗೂ ಕೂಡ ಅದೇ ರೀತಿಯಲ್ಲಿ ಕೌನ್ಸಿಲರುಗಳು ಬರುವುದಕ್ಕೆ ಸಾಧ್ಯವಿದೆ, ಮೇಯರ್, ಡೆಪ್ಯುಟಿ ಮೇಯರ್‌ಗಳಾಗುವುದಕ್ಕೂ ಸಾಧ್ಯವಿದೆ. ಸಾಧ್ಯವಿಲ್ಲದಿರುವ ಪರಿಸ್ಥಿತಿ ಏನೂ ಇಲ್ಲ. ಏಕೆಂದರೆ ಇದು ಈ ಪ್ರಜಾಪ್ರಭುತ್ವದ ಕ್ರಮದಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ, ಇದಕ್ಕೆ ಬೇರೆ ವಿಶಿಷ್ಟವಾದ ಲಕ್ಷಣಗಳು ಬೇಕಾಗಿಲ್ಲ. ಒಟ್ಟಿನಲ್ಲಿ ಈ ಪ್ರಜಾಪ್ರಭುತ್ವ ತತ್ವಗಳ ತಳಹದಿಯ ಮೇಲೆ ಸಾಂಸ್ಥಿಕ ಸಂಘಟನೆಗಳಲ್ಲಿ ಈ ಜನಗಳಿಗೆ ಸ್ವಲ್ಪ ಅನುಭವ ಇದ್ದರೆ ಅಷ್ಟೇ ಸಾಕಾಗುತ್ತದೆ. ಈ ತತ್ವಕ್ಕೆ ಕಟ್ಟುಬಿದ್ದು ನೀವು ಮಾಡುತ್ತಿದ್ದೀರಿ ಎನ್ನುವ ನಿಲುವನ್ನು ನೀವೇನು ಪ್ರತಿಪಾದನೆ ಮಾಡು ತ್ತಿದ್ದೀರಿ ಇದು ಸತ್ಯಕ್ಕೆ ದೂರವಾದುದು ಎಂದು ಸೂಚಿಸುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಕಾರ್ಪೊರೇಷನ್‌ಗಳನ್ನು ಮಾಡಿದಮೇಲೆ ತಕ್ಷಣ ನೀವು ಚುನಾವಣೆಯನ್ನು ಮಾಡುವುದಕ್ಕೆ ಯಾವ ತೊಂದರೆಗಳೂ ಕೂಡ ಇಲ್ಲ. ಅಥವಾ ಒಂದು ಕಾರ್ಪೊರೇಷನ್ ಮಾಡಿ ಚುನಾವಣೆ ಮಾಡಿ ಅಧ್ಯಕ್ಷರು, ಮೇಯರ್, ಉಪಮೇಯರ್ ಬಂದುಬಿಟ್ಟರೆ ಅದು ಚೆನ್ನಾಗಿ ನಡೆಯುವುದೂ ಇಲ್ಲ. ಈಗ ನೀವು ಅದಕ್ಕೆ ನಾಮಿನೇಟ್ ಮಾಡುವುದಾದರೆ ಕೆಲವು ಕ್ರಿಟೀರಿಯಾ ಇಟ್ಟುಕೊಂಡು ನಾಮಿನೇಟ್ ಮಾಡುತ್ತೀರಿ. ಕೊನೆಯಪಕ್ಷ ಅದು ಬಹಳ ಮಾದರಿಯಾಗಿ ನಡೆಯಬೇಕು ಎಂದಾಗ ನೀವು ಈ ನಾಮಕರಣ ಮಾಡುವು ದಕ್ಕೆ ಏನಿಲ್ಲವಾ ಕ್ರಿಟೀರಿಯಾ ಇಟ್ಟುಕೊಂಡಿದ್ದೀರಿ ಅದು ಸರಿಯೋ ಹೌದೋ ಅಥವಾ ಅಲ್ಲವೋ ಎಂಬುದನ್ನು ನಮ್ಮನ್ನು ನೀವು ವಿಶ್ವಾಸಕ್ಕೆ ತೆಗೆದುಕೊಂಡರೆ ಮಾತ್ರ ಹೇಳಬಹುದು. ಅದಕ್ಕೆ ನಾಮಿನೇಷನ್ ಹೇಗೆ ಆಗುತ್ತದೆ. ಮಾನ್ಯ ಉಪಾಧ್ಯಕ್ಷರೇ, ಅದು ನಿಮಗೂ ಗೊತ್ತಿದೆ, ಮಾನ್ಯ ಮಂತ್ರಿಗಳಿಗೂ ಗೊತ್ತಿದೆ, ಸದನಕ್ಕೂ ಗೊತ್ತಿದೆ. ಈಗ ಹೇಳಿದಿರಲ್ಲ ನಾವು ನಿಮ್ಮನ್ನು ಕೇಳಿ ಮಾಡಬೇಕು ಎಂದು ಹೇಳಿ ಇದನ್ನು ಮಾಡಲಿಲ್ಲ ಎಂದು. ಆಗಲೇ ಮಾನ್ಯ ಬೊಮ್ಮಾಯಿಯವರು ಇದಕ್ಕೆ ಹೈಕೋರ್ಟ್ ಸ್ಟೇ ಇದೆ ಎಂದು ಹೇಳಿದರು. ಇನ್ನೂ ಒಂದು ತೊಂದರೆ ಇದರಲ್ಲಿ ಇದೆ. ನೀವು ನಾಮಿನೇಟ್ ಮಾಡಬೇಕು ಎಂದ ತಕ್ಷಣ ಜನಪ್ರವಾಹ ನಿಮ್ಮ ಕೈಕಾಲು ಕಟ್ಟಿ ಎಲ್ಲಿಂದಲೋ ನಿಮ್ಮ ಜುಟ್ಟಿಗೆ ಹಗ್ಗ ಹಾಕಿ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತೆ. ಈ ತೊಂದರೆಯೂ ಇದೆ. ಅವನನ್ನು ಮಾಡುವುದೇ, ಇವನನ್ನು ಮಾಡುವುದೇ ಅಥವಾ ಮತ್ತೊಬ್ಬನನ್ನು ಮಾಡುವುದೇ ಎನ್ನತಕ್ಕಂಥ ತೊಂದರೆಯೂ ಕೂಡ ಇದೆ. ಅದಕ್ಕಾಗಿ ಎಷ್ಟೋ ನಾಮಿನೇಷನ್‌ಗಳನ್ನು ಮಾಡದೇ ಹಾಗೆಯೇ ಸುಮ್ಮನೆ ಕುಳಿತುಕೊಂಡಿದ್ದೀರಿ. ಇದರಲ್ಲಿ ಏನೇನೂ ಸಂದೇಹವಿಲ್ಲ. ನಾಮಿನೇಷನ್ ಮಾಡಬಾರದು ಎನ್ನುವ ಕಾರಣಕ್ಕಾಗಿ ಅಲ್ಲ. ಈ ನಾವಿ

ನೇಷನ್ ಮಾಡುವುದಕ್ಕೆ ನಿಮಗೆ ವ್ಯಾವಹಾರಿಕವಾಗಿ ದೊಡ್ಡ ತೊಂದರೆಗಳೂ ಅಥವಾ ತೊಡಕುಗಳೂ ಕೂಡ ಪ್ರಾಪ್ತಿಯಾಗಿವೆ. ನೀವು ಏನೇ ಮಾಡಿದರೂ, ನೀವು ಏನೇ ಸಪರೇಟ್ ಆಗಿ ಮಾಡಿದರೂ ಅವೆಲ್ಲಾ ನಮ್ಮ ಕಿವಿಯ ಮೇಲೆ ಬೀಳುತ್ತಾ ಇರುತ್ತವೆ. ಆದ್ದರಿಂದ ನಿಮ್ಮ ಕಷ್ಟಗಳು ನಮಗೆ ಗೊತ್ತಿದೆ. ನೀವು ನಾಮಿನೇಷನ್ ಮಾಡುವುದಕ್ಕೆ ಹೊರಟ ಕೂಡಲೇ ಏನು ಆಗುತ್ತದೆ ಎಂಬುದೂ ಕೂಡ ನಮಗೆ ಗೊತ್ತಿದೆ. ಹಾಗೆಯೇ ಇವತ್ತು ನೀವು ಈ ಕಾರ್ಪೊರೇಷನ್ ಮಾಡತಕ್ಕಂಥ ವಿಚಾರದಲ್ಲಿ ಕೂಡ ಸಾಕಷ್ಟು ನೀವು ಆಲೋಚನೆ ಮಾಡಿ. ಮಾಡಬೇಕಾದದ್ದು ಇದೆ. ಇವತ್ತು ಶಿವಮೊಗ್ಗ ಭದ್ರಾವತಿ ಕಾರ್ಪೊರೇಷನ್ ಮಾಡಿಬಿಟ್ಟರೆ ಈಗಿರತಕ್ಕಂಥ ೨ ಮುನಿಸಿಪಾಲಿಟಿಗಳಿಗಿಂತ ಅದು ಉತ್ತಮವಾಗಿ ಕೆಲಸ ನಿರ್ವಹಿಸುತ್ತದೆಯೇ ಎಂದರೆ ಅದು ಸಾಧ್ಯವಿಲ್ಲ. ಅದರಲ್ಲಿ ಬಹಳ ಮೂಲಭೂತವಾದ ತೊಡಕುಗಳು ಇವೆ. ಅದನ್ನು ಬಗೆಹರಿಸಿಕೊಳ್ಳಬೇಕಾದ ಆಗತ್ಯ ಕೂಡ ಇದೆ. ನೀವು ಈ ಬಗ್ಗೆ ಏನು ಆಲೋಚನೆ ಮಾಡಿದ್ದೀರೋ ಗೊತ್ತಿಲ್ಲ. ಮಾನ್ಯ ಉಪಾಧ್ಯಕ್ಷರೇ, ಈ ೬, ೮ ತಿಂಗಳಿಂದ ಈ ಶಿವಮೊಗ್ಗ ಭದ್ರಾವತಿ ಕಾರ್ಪೊರೇಷನ್ ಅನ್ನು ಮಾಡುತ್ತಾರೆ ಎನ್ನತಕ್ಕಂಥ ವಿಚಾರ ನನ್ನ ಕಿವಿ ಮೇಲೆ ಬಿದ್ದಿದೆ. ನಾನು ಶಿವಮೊಗ್ಗ ನಗರವನ್ನು ಪ್ರತಿನಿಧಿಸಿ ಶಾಸಕನಾಗಿದ್ದರೂ ಕೂಡ ಇವತ್ತಿನವರೆಗೆ ಈ ಸರ್ಕಾರ ಈ ಬಗ್ಗೆ ಏನು ಆಲೋಚನೆ ಮಾಡಿದೆ ಎನ್ನುವುದನ್ನು ತಿಳಿಸುವಂಥ ಸೌಜನ್ಯತೆಯನ್ನೂ ಅವರು ತೋರಿಸಲಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ಬಗ್ಗೆ ನಿರ್ಧಾರ ಆಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ —ಅಲ್ಲಿ ಮಾಡಬಹುದು ಅಂತ ಡಿಡೀರನೆ ಅನೌನ್ಸ್ ಮಾಡಿರ ಬಹುದು. ಆದರೆ ಕೊನೆಯಪಕ್ಷ ನೀವು ಏನು ಮಾಡುತ್ತಿದ್ದೀರಿ ಎನ್ನುವುದಾದರೂ ಅದನ್ನು ನಮಗೆ, ಜನರನ್ನು ಪ್ರತಿನಿಧಿಸಿರತಕ್ಕಂಥ ವ್ಯಕ್ತಿಗಳಿಗೆ ತಿಳಿಸುವಂಥ ಸೌಜನ್ಯವನ್ನು ನೀವು ತೋರಿಸಲಿಲ್ಲ. ಅದಕ್ಕೆ ಮೇಯರ್, ಉಪಮೇಯರ್‌ಗೆ ನಾಮಿನೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ನಾನೇನೂ ನಿಮ್ಮ ಹತ್ತಿರ ಬರುವುದಿಲ್ಲ. ಆದರೆ ಇದರಲ್ಲಿ ಪ್ರಶ್ನೆ ಏನಿದೆ ಎಂದರೆ ನಾಮಿನೇಷನ್ ಮಾಡತಕ್ಕಂಥಾದರಲ್ಲೂ ಕೆಲವು ತೊಡಕುಗಳಿವೆ. ಈ ಶಿವಮೊಗ್ಗ, ಭದ್ರಾವತಿಯನ್ನು ಸೇರಿಸಿ ಒಂದು ಕಾರ್ಪೊರೇಷನ್ ಮಾಡಬೇಕಾದರೂ ಕೂಡ ಕೆಲವೊಂದು ಮೂಲ ಸಮಸ್ಯೆಗಳನ್ನು ಬಗೆಹರಿಸದೇ ಮಾಡಿದರೆ ಅದರಿಂದ ಅನುಕೂಲವಾಗುವುದಿಲ್ಲ. ಮಾನ್ಯ ಬೊಮ್ಮಾಯಿಯವರು ಮಾತನಾಡತಕ್ಕಂಥ ಕಾಲದಲ್ಲಿ 'ಕತ್ತೆಗೆ ಹೆಸರು ಬದ ಲಾಯಿಸಿ ಕುದುರೆ ಎಂದು ಹೇಳಿದರೂ ಅದು ಕುದುರೆಯಾಗುವುದಿಲ್ಲ' ಎಂದು ಅವರು ಹೇಳಿದರು. ಅದೊಂದು ದೃಷ್ಟಿಕೋನ. ಇನ್ನೊಂದು ದೃಷ್ಟಿಕೋನ ಇದೆ. ಏನೆಂದರೆ ಕುದುರೆ ಕತ್ತೆಯಾಗುವುದಕ್ಕೆ ಸಾಧ್ಯವಿದೆ. ಆದರೆ ಕತ್ತೆ ಕುದುರೆಯಾಗುವುದಕ್ಕೆ ಸಾಧ್ಯವಾಗದೇ ಹೋಗಬಹುದು. ಹೀಗೆ ಈ ಎರಡು ಮುನಿಸಿಪಾಲಿಟಿಗಳನ್ನು ಸೇರಿಸಿ ಒಂದು ಕಾರ್ಪೊರೇಷನ್ ಮಾಡಿದರೆ ಈ ೨ ಮುನಿಸಿಪಾಲಿಟಿಗಳು ಇದ್ದಂಥ ಸ್ಥಿತಿಗಿಂತ ಈ ಕಾರ್ಪೊರೇಷನ್ ಇನೇ ದುರವಸ್ಥೆಗೆ ಒಳಗಾಗುವುದಕ್ಕೆ ಖಂಡಿತ ಸಾಧ್ಯತೆ ಇದೆ. ಆದ್ದರಿಂದ ನಾನು ಹೇಳತಕ್ಕಂಥ ವಿಚಾರಗಳನ್ನು ನೀವು ಪರಿಗಣಿಸಬೇಕಾಗಿದೆ. ಇವತ್ತು ನೀವು ಈ ನಾಮಿನೇಷನ್ ಮಾಡುವುದಕ್ಕೆ ಹೊರಟರೆ ಅಥವಾ ನಾಮಿನೇಷನ್ ಅನ್ನು ಸರ್ಕಾರ ಮಾಡಿದರೆ ನಮ್ಮ ತಲೆ ಹೋಗಿಬಿಡುತ್ತದೆ, ಅಸೆಂಬ್ಲಿ ಎಲೆಕ್ಷನ್ ಆಗುವ ಮೊದಲೇ ಇದನ್ನು ಮಾಡಿಬಿಟ್ಟರೆ ಅದು ಅವರ ಪರವಾಗಿ ಇರುತ್ತದೆ ಎನ್ನತಕ್ಕಂಥ ಬ್ರಮೆ ಪಟ್ಟುಕೊಳ್ಳುದಕ್ಕೆ ನಾವು ತಯಾರು ಇಲ್ಲ. ಜನಕ್ಕೆ ಸಾತಷ್ಟು ತಿಳಿವಳಿಕೆ ಇದೆ. ಎಲ್ಲಾ ಸರ್ಕಾರ, ಎಲ್ಲಾ ಬೋರ್ಡ್‌ಗಳು, ಎಲ್ಲಾ ಕಾರ್ಪೊರೇಷನ್‌ಗಳು, ಎಲ್ಲಾ ಮುನಿಸಿ ಪಾಲಿಟಿಗಳಲ್ಲಿ ನೀವಿದ್ದರೂ ಜನ ಇನ್ನೊಬ್ಬರಿಗೆ ಓಟು ಕೊಡುವುದಕ್ಕೆ ಸಾಧ್ಯವಿದೆ ಎಂದು ನಮ್ಮ ಹಿಂದಿನ ಚುನಾವಣಾ ಪಲಿತಾಂಶಗಳು ಸ್ಪಷ್ಟಪಡಿಸಿವೆ. ಇಡೀ ಕೇಂದ್ರ ಸರ್ಕಾರ ಒಬ್ಬರ ಕೈಯಲ್ಲಿ ಇದ್ದರೂ ಕೂಡ ರಸ್ತೆಯಲ್ಲಿ ಬಿದಿರತಕ್ಕಂಥ ಒಬ್ಬನನ್ನು ಪ್ರಧಾನಮಂತ್ರಿ ಮಾಡುವುದಕ್ಕೆ ಜನಗಳಿಗೆ ಸಾಧ್ಯವಿದೆ ಎನ್ನುವುದು ಗೊತ್ತಿರಬೇಕಾದರೆ ಅಲ್ಲಿ ನಾಮಿನೇಷನ್ ಮಾಡಿ ಜನರ ಜುಟ್ಟನ್ನು ಹಿಡಿದುಕೊಳ್ಳುತ್ತೇವೆ ಎಂದು ಯಾರೇ ತಿಳಿದುಕೊಂಡರೂ ಅಥವಾ ನೀವೇ ತಿಳಿದುಕೊಂಡರೂ ಅದು ತಪ್ಪು. ನೀವೇನೋ ನಾಮಿನೇಷನ್ ಮಾಡಿಬಿಟ್ಟರೆ ಆಕಾಶ ಕಳಚಿ ಬಿದ್ದೇ ಹೋಗುತ್ತದೆ ಎಂದು ನಾವು ಭಯಪಡುವ ಅಗತ್ಯ ವಿಲ್ಲ. ಈ ದೃಷ್ಟಿಯಿಂದ ನಾನು ಅದನ್ನು ವಿರೋಧ ಮಾಡುತ್ತಾ ಇಲ್ಲ. ಆದರೆ ನಾವು ಪ್ರಜಾಪ್ರಭುತ್ವವನ್ನು ಇಲ್ಲಿ ಬಲಪಡಿಸಬೇಕು ಎಂದು ಹೇಳತಕ್ಕಂಥವರು ಹೆಚ್ಚಹೆಚ್ಚಾಗಿ ಈ ಚುನಾವಣೆಯ ಕಡೆಗೆ ಒಲಿಯಬೇಕೇ ಹೊರತು ದಿನ ಹೋದಂತೆ ಎಲ್ಲದಕ್ಕೂ ನಾಮಿನೇಟ್ ಮಾಡತಕ್ಕಂಥ ತಂತ್ರಕ್ಕೆ ಬಲಿ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ನಾನು ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಈ ನಾಮಿನೇಷನ್ ಬಗ್ಗೆ ನೀವು ೬ ತಿಂಗಳಿನಿಂದ ಹೇಳುತ್ತಿದ್ದೀರಿ. ಮಾನ್ಯಶ್ರೀ ನಾಣಯ್ಯನವರು ಹೇಳಿದಂಥ

ಒಂದು ಅಂಶ ನನಗೆ ಇದರಲ್ಲಿ ಕಾಣಿಸುತ್ತಿದೆ. ನೀವು ಈ ಪವರ್ಸನ್ನು ತೆಗೆದುಕೊಂಡ ಮೇಲಾದರೂ ಅದಕ್ಕೆ ನಾಮಿನೇಟ್ ಮಾಡುತ್ತಿರೋ ಇಲ್ಲವೋ ಎನ್ನುತಕ್ಕಂಥ ಪ್ರಶ್ನೆ ಇದೆ. ನೀವೇನು ಒಂದು ತಂತ್ರವನ್ನು ಮಾಡುತ್ತಿದ್ದೀರಿ ಎಂದರೆ ಎಲ್ಲರ ಮೂಗಿಗೂ ಹೇಗೆ ತುಪ್ಪವನ್ನು ಹಚ್ಚಬೇಕು ಎನ್ನತಕ್ಕಂಥಾದ್ದು ಇಂತಹ ಚಾಣಾಕ್ಷತನ ಇನ್ನು ಯಾರಿಗೂ ಇರುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಶಭಾಸ್‌ಗಿರಿಯನ್ನು ನಾವು ನಿಮಗೆ ಕೊಡಬೇಕು. ಪ್ರತಿಯೊಬ್ಬರೂ ನಂಬಿಕೊಂಡು ಕುಳಿತುಕೊಳ್ಳುವ ರೀತಿಯಲ್ಲಿ, ನೀವು ತುಪ್ಪ ಹಚ್ಚಿದ್ದೀರಿ ಎಂದು ಗೊತ್ತಾಗದ ರೀತಿಯಲ್ಲಿ ತುಪ್ಪ ಹಚ್ಚತಕ್ಕಂಥಾದ್ದು ತುಂಬಾ ಶ್ಲಾಘನೀಯವಾದದ್ದು. ಏಕೆಂದರೆ ಅದು ಗೊತ್ತಾಗಿಬಿಟ್ಟರೆ ಅವನು ಅದನ್ನು ಒರೆಸಿಕೊಂಡು ಬಂದುಬಿಡುತ್ತಾನೆ. ಆ ಕೆಲಸವನ್ನು ನೀವು ಮಾಡಿ. ಏಕೆಂದರೆ ನೀವು ನಾಮಿನೇಟ್ ಮಾಡತಕ್ಕಂಥಾದರಲ್ಲಿ ಕೂಡ ನನಗೆ ವಿಶ್ವಾಸವಿಲ್ಲ. ನಮ್ಮ ಊರಿನಲ್ಲಿ ಈಗಾಗಲೇ ಡಜನ್‌ಗಟ್ಟಲೆ ಜನ ಕಳೆದ ೬ ತಿಂಗಳಿನಿಂದ ಗೌನ್ ಹೊಲೆಯುವುದಕ್ಕೆ ಪಾಕರ್ದ್ದಾರೆ. ಕಂಡಕಂಡಲ್ಲಿ ಮೇಯುತ್ತಿದ್ದರೆಲ್ಲಾ ಗೌನ್‌ಗೆ ಅಳತೆ ಕೊಟ್ಟುಕೊಂಡು ನಾನು ಮೇಯರ್, ನಾನು ಉಪಮೇಯರ್ ಎಂದು ಹೇಳಿಕೊಂಡು ಹೊರಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನೀವೇ ಆಗಿ ಏನಂತೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಯ್ಯಯ್ಯೋ ನನ್ನ ಹೆಸರು ಬೇಡ. ಮಾನ್ಯ ಶಿರ್ನಳ್ಳಿ ಚಂದ್ರಶೇಖರ್ ಇಲ್ಲಿ ಇಲ್ಲ ಅವರು ಇಲ್ಲಿ ಇದ್ದಿದ್ದರೆ ಪಾಯಿಂಟ್ ಆಫ್ ಆರ್ಡರ್ ತೆಗೆದುಕೊಳ್ಳುತ್ತಾ ಇದ್ದರು. ನನ್ನನ್ನು ಹೂಡಿ ಏನು ಆಗಬೇಕು ? ಆದ್ದರಿಂದ ಅಂತಹ ಜನಗಳನ್ನು ಕಾಡಿ ಚುನಾವಣೆಗೆ ನಿಲ್ಲಿಸಿದರೆ ಅವರಿಗೆ ಠೇವಣಿ ಕೂಡ ಬರುವುದಿಲ್ಲ. ಅಂತಹ ಜನರು ಈ ನಾಮಿನೇಷನ್ ಅನ್ನು ಹೇಗೆ ಸಂಪಾದನೆ ಮಾಡಬೇಕು, ಚೀಫ್ ಮಿನಿಸ್ಟರನ್ನು ಎಲ್ಲಿ ಹಿಡಿಯಬೇಕು, ಅವರ ಸುಬಧಿಕರು ಯಾರು, ಅವರು ಯಾವ ಊರಿನಲ್ಲಿ ಇದ್ದಾರೆ, ಅವರಿಂದ ಒಂದು ಮಾತು ಹೇಳಿಸಿದರೆ ಹೇಗೆ ಇದೆಲ್ಲವನ್ನೂ ಅವರು ಬಹಳ ಚೆನ್ನಾಗಿ ಕಲಿತಿದ್ದಾರೆ. ಈ ತರಹದ ಚಟುವಟಿಕೆಗಳಿಂದ ಸಂಪೂರ್ಣ ಪ್ರಜಾಪ್ರಭುತ್ವ ತತ್ವಕ್ಕೆ ತದ್‌ವಿರುದ್ಧವಾದ ಮನಃಸ್ಥಿತಿಗೆ ಪ್ರಚೋದನೆ ಸಿಕ್ಕಿ ಅದರಿಂದ ನಿಮ್ಮ ಮೇಲೆ ದುಷ್ಪರಿಣಾಮವಾಗುತ್ತದೆ. ನಾಳೆದಿವಸ ನೀವು ಈ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಇದು ಬಹಳ ಕಠಿಣಕ್ಕೆ ಬರುವುದರಿಂದ ನೀವು ಈ ನಾಮಿನೇಷನ್ ಮಾಡುವುದಕ್ಕೆ ಮನಸ್ಸನ್ನು ಮಾಡಬಾರದು. ಇದರಿಂದ ನಿಮಗೆ ಯಾವ ಲಾಭವೂ ಇಲ್ಲ ಅಥವಾ ನಿಜವಾಗಿ ಯಾವ ಪ್ರಯೋಜನವೂ ಇಲ್ಲ. ಆ ಒಂದು ದೃಷ್ಟಿಯಿಂದ ನೀವು ಕಾರ್ಪೊರೇಷನ್ ಮಾಡಬೇಕಾದರೆ ನಿಜವಾಗಿಯೂ ಕೂಡ ಈಗಿರತಕ್ಕಂಥ ೨ ಮುನಿಸಿಪಾಲಿಟಿಗಳಿಗಿಂತ ಅದು ಉತ್ತಮವಾಗುವುದಕ್ಕೆ ಬೇಕಾಗುವಂಥ ಒಂದು ಹಿನ್ನೆಲೆಯನ್ನು ರಚನೆ ಮಾಡಿ ಆ ಕಾರ್ಪೊರೇಷನ್ ಅನ್ನು ಮಾಡಬೇಕು. ಸುಮ್ಮನೆ ಏನೋ ಮಂತ್ರಿಮಂಡಲದಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ ಅದರಂತೆ ಮಾಡಬೇಕು ಎನ್ನುವುದಕ್ಕಾಗಿ ನೀವು ಅದನ್ನು ಮಾಡಬೇಡಿ. ಇನ್ನೂ ೧೦ ದಿವಸ ತಡೆದು ಮಾಡುತ್ತೇವೆ ಎಂದು ಹೇಳಿದರೂ ಪರವಾಗಿಲ್ಲ. ನಾನು ಹೇಳಿದ ಎಲ್ಲಾ ವಿಚಾರಗಳನ್ನೂ ಗಮನಿಸಿ ಕಾರ್ಪೊರೆಷನ್ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಆ ವಿಚಾರಗಳನ್ನು ಯೋಚನೆ ಮಾಡದೇ ಆಲ್ಲಿ ಕಾರ್ಪೊರೇಷನ್ ಮಾಡಬೇಕು ಎಂದು ಹೇಳಿ ಅದನ್ನು ಮಾತಿಬಿಟ್ಟು ಯಾರದೋ ಒತ್ತಡಕ್ಕೆ ಮಣಿದು ನಿಜವಾಗಿಯೂ ಯಾವ ಯೋಗ್ಯತೆಯೂ ಇಲ್ಲದೇ ಇರತಕ್ಕಂಥವರನ್ನು ನೀವು ಅದಕ್ಕೆ ನಾಮಕರಣ ಮಾಡಿದರೆ ನಾಳೆದಿವಸ ಅದರ ಕೆಟ್ಟ ಹೆಸರು ಪೂರ್ತಿಯಾಗಿ ನಿಮಗೆ ಬರುತ್ತದೆ ಮತ್ತು ಈ ಸರ್ಕಾರಕ್ಕೂ ಕೂಡ ಬರುತ್ತದೆ. ಏಕೆಂದರೆ ಆ ಮುನಿಸಿಪಾಲಿಟಿಗಳು ಸರಿಯಾಗಿ, ಚೆನ್ನಾಗಿ ಕೆಲಸ ಮಾಡದೇ ಹೋದರೆ ಆಯಾ ಭಾಗದ ಕಾರ್ಯಕ್ರಮಗಳೆಲ್ಲಾ ಹಿಂದೆ ಸರಿದು ಹೋಗುತ್ತವೆ. ಆ ದೃಷ್ಟಿಯಿಂದ ನೀವು ಇದನ್ನು ಪುನರಾಲೋಚನೆ ಮಾಡಬೇಕು, ಈ ಸಭೆಯಲ್ಲಿ ಈ ಮಸೂದೆಯ ವಿಚಾರದಲ್ಲಿ ನಮ್ಮನ್ನು ಒತ್ತಾಯಿಸಬಾರದೆಂದು ನಾನು ಮಾನ್ಯ ಮಂತ್ರಿಗಳಿಗೆ ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI. QAMARUL ISLAM. (Gulbarga).—Sir, this amendment will give powers to Government to nominate mayors and Deputy Mayors Councillors to the newly formed Corporations. Gulbarga has also been declared as a Corporation and after the declaration I was happy that elected representatives will come and function properly for the development of the Corporation area. From 1972 onwards an Administrator

is there. As I can see Gulbarga is having lot of problems like water scarcity, roads etc. Ours is a democratic country and right from Parliament upto panchayat level there should be elections so that people's representatives could run the administration. We are also the representatives of the public and we have been elected by the people. This is the system of parliamentary democracy and we have to strengthen the norms of democracy but this amendment will go against the spirit of that system. I personally feel that this is not going to strengthen the norms of democracy. It has been assured in this House several times that elections will be held to the municipalities but this promise has not been fulfilled by the hon'ble Minister who has presented this Bill. We were given to understand that municipalities will be converted into Corporations and then elections will be held. If the nomination is there for a period of six months we can come to the conclusion that this is a temporary measure and elections will be held after six months. But here, the period is for three years. This amendment is against the spirit of democracy and we are not strengthening the norms of democracy. Sir, with these few words I oppose the Bill.

SRI B.V. KAKKILAYA.—It affects the administration of so many municipalities and corporations,

ಶ್ರೀ ಪಿ. ರಾಮಭಟ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಈ ಮಸೂದೆಯನ್ನು ನಾನು ವಿರೋಧಿಸಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಅನೇಕ ಮುನಿಸಿಪಾಲಿಟಿಗಳನ್ನು ಕಾರ್ಪೊರೇಷನ್‌ಗಳಾಗಿ ಮಾಡಿ ಈ ಕಾರ್ಪೊರೇಷನ್‌ಗಳಿಗೆ ಚುನಾವಣೆಗಳನ್ನು ನಡೆಸಿ ಜನರ ಮತದಾನವನ್ನು ಪಡೆದು ಚುನಾಯಿತ ಸದಸ್ಯರು ಮತ್ತು ಮೇಯರ್ ಉಪಮೇಯರ್‌ಗಳಾಗುತ್ತಿದ್ದರು. ಆದರೆ ಈ ಸರ್ಕಾರ ಪ್ರಜಾಪ್ರಭುತ್ವದಲ್ಲಿರುವ ಪ್ರಜೆಗಳ ಮತದಾನವನ್ನೇ ಕಿತ್ತು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ, ಈ ರೀತಿಯ ಒಂದು ಕಾನೂನು ತರುವುದರಿಂದ ಏನಾಗುತ್ತದೆ ಎಂದರೆ ಸರ್ಕಾರದವರಿಗೆ ಯಾರು ಬೇಕೋ ಅವರನ್ನು ಮಾತ್ರ ಕಾರ್ಪೊರೇಷನ್‌ಗಳಲ್ಲಿ ನಾಮಕರಣ ಮಾಡಬೇಕು ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿರುವ ಪ್ರಜೆಗಳು ತಮ್ಮ ಮತದಾನದ ಒಂದು ಹಕ್ಕನ್ನು ಈ ಸರ್ಕಾರ ಕಳದುಕೊಳ್ಳುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ For the reasons beyond the control of the Government elections could not be held and therefore, elections will be held after three years ಅನೇಕ ಮುನಿಸಿಪಲ್ ಕಾರ್ಪೊರೇಷನ್‌ಗಳಲ್ಲಿ ಈ ರೀತಿ ನಡೆಯುತ್ತಿದೆ. ಮಾನ್ಯ ಸ್ನೇಹಿತರು ಒಂದು ಮಾತನ್ನು ಹೇಳಿದರು. So as to place them on a firm footing ಎಂದು ಹೇಳಿದರು. So as to place the congress people on a firm footing ಆ ರೀತಿಯಲ್ಲಿ ಮಾಡಿದ್ದಾರೆ. ಆದ್ದರಿಂದ ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಹೆಚ್. ಗಂಗಾಧರಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಮಸೂದೆಯ ಮೇಲೆ ಅನೇಕ ಜನ ನನ್ನ ಮಾನ್ಯ ಮಿತ್ರರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಪೊದಲನೆಯದಾಗಿ ಹೇಳಿದರು ನಮ್ಮ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾನ್ನು ತರುತ್ತಿದ್ದಾರೆ ಎಂದು, ಆದರೂ ಕೂಡ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ಇದೇ ಸದನದಲ್ಲಿ ಅನೇಕ ಭರವಸೆಗಳನ್ನು ಕೊಟ್ಟರು. ಅದು ಏನೆಂದರೆ ನಾವು ಬರುವ ನಮೆಂಬರ್

ತಿಂಗಳಿನಲ್ಲಿ ಎಲ್ಲಾ ಕಾರ್ಪೊರೇಷನ್‌ಗಳ ಚುನಾವಣೆಯನ್ನು ನಡೆಸುತ್ತೇವೆ ಎಂದು. ಆದರೆ ಪರಿಣಾಮ ಏನಾಯಿತು ಎಂದರೆ ಚುನಾವಣೆಗಳ ಕಾಲವನ್ನು ಮುಂದಕ್ಕೆ ಹಾಕಿಕೊಂಡು ಬಂದರು. ನನಗನಿಸುತ್ತದೆ ಇವರು ಚುನಾವಣೆಗಳನ್ನು ಮುಂದಕ್ಕೆ ಹಾಕಲು ಕಾರಣವಾದರೂ ಇಷ್ಟೇ. ಇವರ ದುರಾದೃಷ್ಟದಿಂದ ಆಂಧ್ರಪ್ರದೇಶದಲ್ಲಿ ಆದ ಪರಿಣಾಮವನ್ನು ಇವರು ಜ್ಞಾಪಕಕ್ಕೆ ತೆಗೆದುಕೊಂಡು ಏನಾದರೂ ಈ ರೀತಿ ಚುನಾವಣೆಗಳನ್ನು ಮುಂದಕ್ಕೆ ಹಾಕಿರಬಹುದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ ಇವರು ತಂದಿರುವ ಮಸೂದೆಯಲ್ಲಿ ಸೆಕ್ಷನ್ ೫೦೩ (ಎ) ಇದು ಒತ್ತಾಯ ತರುತ್ತದೆ. ಆದರೆ ಸೆಕ್ಷನ್ ೫೦೧ (ಸಿ) ಮತ್ತು ೫೦೩ ವಿಧಿಯಲ್ಲಿ ಮತ್ತು (ಸಿ) ಯಲ್ಲಿ ಮತ್ತು (ಕೆ) ಯಲ್ಲಿ ಈ ರೀತಿ ಇವೆ. (k) The president and the Vice-President of the city Municipal council shall be the Mayor and the Dy. Mayor of the Corporation. ಇಲ್ಲಿ ಮುನಿಸಿಪಾಲಿಟಿಯ ಅಧ್ಯಕ್ಷರು ಅಂತ ಇದೆ. ಹಾಗೆಯೇ Such administrator officer shall be deemed to be an administrator appointed in respect of the Corporation under section 99 of this Act. ಹಾಗೆಯೇ ಮುಂದಕ್ಕೆ ಹೋದರೆ from that date i.e. the date of declaration of the municipality as a Corporation the Administrator period continues for one year.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈಗ ಲೆವಿ ಬಗ್ಗೆ ಡಿಸ್‌ಕಷನ್‌ಗೆ ತೆಗೆದುಕೊಳ್ಳೋಣ ನಾಳೆ ನಾವು ಉಳಿದ ಎಲ್ಲಾ ಮಸೂದೆಗಳನ್ನು ಪಾಸು ಮಾಡಿಕೊಡುತ್ತೇವೆ.

SRI. H. GANGADHARAN.—(b) the councillors of the city municipal council holding office as such immediately before the said date shall become councillors of the Corporation. (c) The President of the said city municipal council shall become the mayor of the corporation and di-charge duties and perform functions of the mayor under this Act and the Vice-President of the said city municipal council shall become the Dy Mayor of the said corporation under this Act

This is not over-ruled by the amended section 503 (A). shall is used in all these provisions and the president and the Vice-President automatically become the Mayor and Dy. Mayor and the councils become corporations. This contravenes the amedinng section which is brought before this House. That can be applied only in places where there is no elected body. But that point is not clear in the amended section. Therefore, from that point of view also this amendment cannot be accepted and that will have to be opposed ಆದ್ದರಿಂದ ನಾನು ಹೇಳುವುದೇನೆಂದರೆ ಚುನಾವಣೆಗಳನ್ನು ನಡೆಸುವವರೆಗೆ ಕಾರ್ಪೊರೇಷನ್‌ಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಿಸುವುದು ಒಳ್ಳೆಯದು. ಈ ಮಸೂದೆಯು ಹಿನ್ನೆಲೆಯಲ್ಲಿ ಯಾವುದೂ ಒಂದು ತಾತ್ವಿಕ ಸಿದ್ಧಾಂತ ಅಡಗಿದೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಪ್ರಜಾಪ್ರಭುತಕ್ಕೆ ಸಂಪೂರ್ಣವಾಗಿ ಕೊಡಲಿ ಪೆಟ್ಟು ಬಿದ್ದಂತಾಗಿದೆ ಎಂದು ಹೇಳುತ್ತಾ ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಮಸೂದೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮಂದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಪೌರಡಳಿತ ಸಚಿವರು ತಂದಿರತಕ್ಕಂತಹ ಈ ಮಸೂದೆ ಬಹುಶಃ ನನಗನಿಸುತ್ತದೆ ಇನ್ನು ಒಂದು ಕರಾಳ ಮಸೂದೆಯೆಂದು, ಬಹುಶಃ ಇಂತಹ ಒಂದು ತಿದ್ದುಪಡಿ ಮಸೂದೆಯನ್ನು ಯಾರೂ ತಂದಿರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ ಎಂದು ಅನೇಕ ಸಾರಿ ಹೇಳಿಕೊಂಡು ಬಂದಿದ್ದಾರೆ. ಆದರೆ ಇಂತಹ ಒಂದು ಮಸೂದೆಯನ್ನು ಏತಕ್ಕೆ ತಂದರೂ ನನಗೆ ಗೊತ್ತಾಗಲಿಲ್ಲ. ಈ ಸರ್ಕಾರಕ್ಕೆ

ಕಾರ್ಪೊರೇಷನ್ ಇರಬೇಕು. ಕಾರ್ಪೊರೇಷನ್ ಅಭಿವೃದ್ಧಿಯಾಗಬೇಕು. ಮೇಯರ್ ಮತ್ತು ಉಪಮೇಯರ್ ಇರಬೇಕು ಆದರೆ ಅವರೆಲ್ಲರನ್ನೂ ಕೂಡ ಈ ಸರ್ಕಾರಕ್ಕೆ ಬೇಕಾದವರನ್ನು ನಾಮಕರಣ ಮಾಡಿಕೊಳ್ಳಬೇಕು. ಇದು ಹೇಗಿದೆ ಎಂದರೆ ಮದುವೆ ಮಾತ್ರ ಮಾಡಿಕೊಳ್ಳಿದಾರದು ಎಲ್ಲ ಸುಖಸೌಭಾಗ್ಯಗಳು ಸುಲಭವಾಗಿ ಸಿಗಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ತಾವು ಎಲ್ಲಾ ಸುಖಸೌಭಾಗ್ಯಗಳನ್ನು ಈಗಾಗಲೇ ಅನುಭವಿಸಿದ್ದೀರಿ.

ಶ್ರೀ ಪಿ. ರಾಮದೇವ್.—ಎನ್ನುವಂತಹ ಮಸೂದೆಯನ್ನು ನೀವು ತಂದಿದ್ದೀರಿ ಕಾರ್ಪೊರೇಷನ್‌ಗೆ ಸ್ವಂತ ಅಧಿಕಾರವಿದ್ದರೆ ಮಾತ್ರ ನಗರದ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ನೀವು ಈಗ ನಾಮಕರಣ ಮಾಡಿದ ಸದಸ್ಯರನ್ನು ನೇಮಕ ಮಾಡುವುದರಿಂದ ದುರುಪಯೋಗಕ್ಕೆ ಅನುಕೂಲವಾಗುತ್ತದೆ. ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ನಾನು ಮೇಯರ್ ಉಪಮೇಯರ್ ಎಂದು ಹೇಳಿಕೊಂಡು ಎಷ್ಟೋ ಜನ ಗೌನ್‌ಗಳನ್ನು ಹಾಕಿಕೊಂಡು ತಿರಗಾಡುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಮಸೂದೆ ಅಷ್ಟು ಸಮರ್ಪಕವಾಗಿಲ್ಲ ಎಂದು ಹೇಳಿ ನಾನು ಮತ್ತೊಮ್ಮೆ ಈ ಮಸೂದೆಯನ್ನು ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಮತ್ತು ತಾವು ಆದಷ್ಟು ಬೇಗ ಚುನಾವಣೆಯನ್ನು ನಡೆಸಬೇಕೆಂದು ಸಪ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಪೌರಾಡಳಿತ ಸಚಿವರು ತಂದಿರತಕ್ಕಂತಹ ಮಸೂದೆಯ ಬಗ್ಗೆ ನಾನು ಹೇಳತಕ್ಕಂತಹ ಅನೇಕ ವಿಚಾರಗಳನ್ನು ನಮ್ಮ ಮಾನ್ಯ ಮಿತ್ರರು ಹೇಳಿದ್ದಾರೆ ಅದರೂ ಸಹಾ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ನಮ್ಮ ಸರ್ಕಾರದವರು ತಂದಿರತಕ್ಕಂತಹ ಮಸೂದೆಯಲ್ಲಿ ಕಾರ್ಪೊರೇಷನ್‌ಗಳಿಗೆ ನಾಮಕರಣ ಮಾಡಿದ ಸದಸ್ಯರು ಮತ್ತು ಮೇಯರ್, ಉಪಮೇಯರ್‌ಗಳನ್ನು ನೇರವಾಗಿ ಸರ್ಕಾರ ನಾಮಕರಣಮಾಡುವ ಒಂದು ಅಧಿಕಾರವನ್ನು ತೆಗೆದುಕೊಳ್ಳುತ್ತಿರುವುದು ಪ್ರಜಾಪ್ರಭುತ್ವಕ್ಕೆ ವಿರೋಧ ಅಲ್ಲವೇ. ಇದರಲ್ಲಿ ಇರುವಂತಹ ಉದ್ದೇಶವನ್ನು ಕೂಡ ನಾವು ಪ್ರಶ್ನೆ ಮಾಡಬೇಕಾಗಿದೆ, ಈಗ ಮಂಗಳೂರು ನಗರದಲ್ಲಿ ಕಾರ್ಪೊರೇಷನ್ ಮಾಡಿದ್ದಾರೆ. ಇನ್ನೂ ಅನೇಕ ನಗರಗಳು ಈ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತವೆ. ಈ ಎಲ್ಲಾ ಕಾರ್ಪೊರೇಷನ್‌ಗಳ ವಿಚಾರದಲ್ಲಿ ಸರ್ಕಾರ ಸೂಕ್ತವಾದ ಕ್ರಮವನ್ನು ಏತಕ್ಕೆ ತೆಗೆದುಕೊಂಡಿಲ್ಲ ಎಂಬುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ.

4-00 ಪಿ. ಎಂ.

ಏಕೆ ಇಷ್ಟು ಅವಸರವಾಗಿ ಮುನಿಸಿಪಾಲಿಟಿ ಇದ್ದುದನ್ನು ಕಾರ್ಪೊರೇಷನ್ನಾಗಿ ಮಾಡಿದಿರಿ ಅದಕ್ಕೆಲ್ಲಾ ಚುನಾವಣೆ ಆಗಬೇಕಾಗಿತ್ತು. ಆದರೆ ಇವತ್ತು ಇಲ್ಲ. ಇಷ್ಟು ಅವಸರವಾಗಿ ಕಾರ್ಪೊರೇಷನ್ನಾಗಿ ಪರಿವರ್ತನೆ ಮಾಡುವುದಕ್ಕೆ ಏಕೆ ಕ್ರಮ ತೆಗೆದುಕೊಂಡರೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಪಂಚಾಯಿತಿಗೆ ಸೇರಿದಂಥ ಅನೇಕ ಹಳ್ಳಿಗಳನ್ನು ಕಾರ್ಪೊರೇಷನ್‌ಗೆ ಸೇರಿಸಿಬಿಟ್ಟಿದ್ದಾರೆ. ಆ ಹಳ್ಳಿಗಳಿಗೆ ಅನೇಕ ವರ್ಷಗಳಿಂದ ಯಾವುದೇ ಸೌಲಭ್ಯಗಳನ್ನು ಕೊಡಲಿಕ್ಕೆ ಆಗಲಿಲ್ಲ. ಮಂಗಳೂರು ಕಾರ್ಪೊರೇಷನ್‌ಗೆ ಯಾವ ಗ್ರಾಮಗಳನ್ನು ಸೇರಿಸಿದರೆ ಆ ಗ್ರಾಮಗಳಿಗೆ ಯಾವ ಸೌಕರ್ಯಗಳನ್ನು ಕೊಡಬೇಕೋ ಆ ಸೌಕರ್ಯಗಳನ್ನು ಕೊಡಲಿಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಆದರೆ ಟ್ಯಾಕ್ಸನ್ನು ಮಾತ್ರ ಬೇರೆ ಕಡೆ ವಸೂಲು ಮಾಡಿದಹಾಗೆ ಬಿಂಡಿತವಾಗಿಯೂ ವಸೂಲು ಮಾಡುತ್ತೀರಿ. ತಮ್ಮ ಅನೇಕ ಕಾನೂನುಗಳು ಅಂದರೆ ಉದಾಹರಣೆಗೆ ಹೇಳುವುದಾದರೆ ಹೌಸ್‌ರೆಂಟ್ ಕಂಟ್ರೋಲ್ ಆಕ್ಟ್ ಏನಿದೆ ಅದನ್ನೂ ಕೂಡ ಆ ಹಳ್ಳಿಗಳಲ್ಲಿ ಇನ್ನೂ ವಿಸ್ತರಣೆ ಮಾಡಿಲ್ಲ, ಆ ಜನರಿಗೆ ರಕ್ಷಣೆ ಕೊಟ್ಟಿಲ್ಲ. ತಮ್ಮ ಆಡಳಿತ ಯಾವ ರೀತಿ ನಡೆಯುತ್ತಾ ಇದೆ ಅಂದರೆ ಕಾರ್ಪೊರೇಷನ್ ಎಂದು ಬೋರ್ಡ್ ಹಾಕಿದ್ದೀರಿ. ಆ ಪ್ರದೇಶವೆಲ್ಲಾ ಕಾರ್ಪೊರೇಷನ್ನಿನೊಳಗೆ ಬಂದಿದೆ ಎಂದು ಹೇಳುತ್ತೀರಿ ಅಷ್ಟೇ ಹೊರತು ಅಭಿವೃದ್ಧಿ ಮಾಡುವುದಕ್ಕೆ ಬೇಕಾದಂಥ ಯೋಜನೆಯಾಗಲಿ, ಅದಕ್ಕೆ ಬೇಕಾದಂಥ ಹಣದ ವಿಚಾರಗಳನ್ನು ತಿಳಿದುಕೊಂಡು ವ್ಯವಸ್ಥೆ ಮಾಡುವುದಾಗಲಿ, ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅಂಥಾ ಒಂದು ಸಂದರ್ಭದಲ್ಲಿ ಆಫೀಸರ್ಸ್‌ನ್ನು ನಾಮಕರಣ ಮಾಡುವ ಅಧಿಕಾರವನ್ನು ಏಕೆ ತೆಗೆದುಕೊಂಡಿರಿ. ಹಿಂದಿನ ಹಳೇ ಆಕ್ಟ್ ಪ್ರಕಾರ ಒಂದು ಮುನಿಸಿಪಾಲಿಟಿ ಇದ್ದುದನ್ನು ಕಾರ್ಪೊರೇಷನ್ನಾಗಿ ವಿಸ್ತರಣೆ ಮಾಡಿದರೆ ಅಲ್ಲಿದ್ದಂಥ ಕೌನ್ಸಿಲರುಗಳನ್ನು ಬಹುಮಟ್ಟಿಗೆ ಸೇರಿಸಿಕೊಂಡು ಕಾರ್ಪೊರೇಷನ್ನಿಗೆ

ನಾಮನೇಟ್ ಮಾಡಬಹುದು ಎಂದು ಇನ್ನೆ ಈ ಒಂದು ದೂರಾಲೋಚನೆಯನ್ನಿಟ್ಟುಕೊಂಡು ಮುನಿಸಿಪಾಲಿಟಿಗಳನ್ನು ಹೀಗೆ ಕಿತ್ತುಹಾಕಿದಿರಿ. ಆದನ್ನು ಇವರೇನೂ ಮಾಡುವಹಾಗಿಲ್ಲ. ನಾವು ಹಳೆ ಮುನಿಸಿಪಾಲಿಟಿ ಕೌನ್ಸಿಲರ್ಸ್ ಎಂದು ಹೇಳುವಹಾಗಿಲ್ಲ.

ಶ್ರೀ ವೈ ರಾಮಕೃಷ್ಣ.—ಆ ಉದ್ದೇಶ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಹೀಗೆ ಹೇಳುತ್ತೀರಿ. ಹಿಂದೆ ಏನಾಯಿತು ಎಂದರೆ, ಯಾರು ಮುನಿಸಿಪಲ್ ಕೌನ್ಸಿಲರ್ಸ್ ಇದ್ದರು ಅವರು ದೂರ ಇಟ್ಟರು. ಆದರಲ್ಲಿ ಎಲ್ಲಾ ಪಕ್ಷದವರೂ ಇದ್ದರು. ಮಂಗಳೂರು ಮುನಿಸಿಪಾಲಿಟಿ ಬಗ್ಗೆ ಹೇಳುವುದಾದರೆ, ಅಲ್ಲಿ ಬೇರೆ ಪಕ್ಷದವರು ಮುನಿಸಿಪಾಲಿಟಿ ಛೇರ್ಮನ್ನಾಗಿ ಆಡಳಿತ ನಡೆಸಿದ್ದಾರೆ. ಇಂತಹ ಒಂದು ಪರಂಪರೆ ಇದ್ದರೂ ಕೂಡ ಸರ್ಕಾರಕ್ಕೆ ಧಕ್ಕೆ ಬಂದಿಲ್ಲ ಮುನಿಸಿಪಾಲಿಟಿಗಳು ಸರ್ಕಾರಕ್ಕೆ ಸಹಕಾರ ಕೊಡದೇ ಇಲ್ಲ. ಆಳುವಾಗ ಬಹುಮತ ಇರಬೇಕು ಎಂದು ಏನೂ ಇಲ್ಲ. ಇಂತಹ ಸಂದರ್ಭದಲ್ಲಿ ನಾಮಿನೇಷನ್ ಮಾಡಲಿಕ್ಕೆ ತಾವು ಅಧಿಕಾರ ತೆಗೆದುಕೊಂಡಿದ್ದೀರಿ. ನಾಮಿನೇಟೆಡ್ ಕೌನ್ಸಿಲರ್ಸ್ ಏನು ಇರುತ್ತಾರೆ, ಇವರಿಂದ ಕಾರ್ಪೋರೇಷನ್ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ತಮಗೆ ಕೊಡುತ್ತೇನೆ. ಈಗ ರಾಜ್ಯದ ಅನೇಕ ಕಡೆಗಳಲ್ಲಿ ಭೂ ಸುಧಾರಣಾ ಶಾಸನ ಬಹಳ ತೀವ್ರಗತಿಯಿಂದ ಜಾರಿಗೆ ಬರಬೇಕು ಎಂದು ಒಂದು ತಾಲ್ಲೂಕಿಗೆ ನಾಲ್ಕೈದು, ಹತ್ತು ಟ್ರಿಬ್ಯುನಲ್‌ಗಳನ್ನು ಮಾಡಿದಿರಿ. ಹಿಂದೆ ಒಂದು ತಾಲ್ಲೂಕಿಗೆ ಒಂದು ಟ್ರಿಬ್ಯುನಲ್. ಅದರಲ್ಲಿ ಶಾಸಕರು ಸದಸ್ಯರಾಗಿರಬೇಕು ಎಂದು ಇತ್ತು. ನಂತರ ಕಡ್ಡಾಯವಾಗಿ ಶಾಸಕರು ಇರುವುದು ಬೇಡ ಎಂದು ತಿದ್ದುಪಡಿ ಮಾಡಿದಿರಿ. ಹಿಂದೆ ಟ್ರಿಬ್ಯುನಲ್‌ನಲ್ಲಿ ಕಣ್ಣಿಟ್ಟು ನೋಡುವುದಕ್ಕೆ ಜನಕ್ಕೂ ಸಾಧ್ಯವಿರುತ್ತಿತ್ತು, ಸರ್ಕಾರಕ್ಕೂ ಸಾಧ್ಯವಿರುತ್ತಿತ್ತು. ಪೆಚ್ಚು ಕಡಿಮೆ ಆದಾಗ ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿರುತ್ತಿತ್ತು. ಅನೇಕ ಕಡೆಗಳಲ್ಲಿ ಬದಲಾವಣೆ ಮಾಡುವುದಕ್ಕೆ. ತನಿಖೆ ಮಾಡುವುದಕ್ಕೆ ಸಾಧ್ಯವಾಗಿ ಬದಲಾವಣೆ ಮಾಡಿದ್ದರು. ನೀವು ಏಕಾಏಕಿ ೧೫೦ ಟ್ರಿಬ್ಯುನಲ್‌ಗಳನ್ನು ಮಾಡಿದಿರಿ, ನನ್ನ ತಾಲ್ಲೂಕಿಗೆ ೪ ಟ್ರಿಬ್ಯುನಲ್‌ಗಳಾಯಿತು ಇದರಲ್ಲಿ ೧೬ ಸದಸ್ಯರನ್ನು ೧೬ ಸಲ ಬದಲಾವಣೆ ಮಾಡಿದಿರಿ. ಏಕೆಂದರೆ, ಪೈಪೋಟಿ ಬಹಳ ಆಯಿತು. ಮೂರು ದಿವಸಕ್ಕೆ ಒಬ್ಬ ಟ್ರಿಬ್ಯುನಲ್ ಮೆಂಬರ್ ಇರುವುದಾಯಿತು. ಇಂತಹ ಗೊಂದಲಗಳು ಉಂಟಾಯಿತು. ಆಲ್ಲಿನ ಡೆಪ್ಯೂಟಿ ಕಮಿಷನರಿಂದ ವರದಿಗಳನ್ನು ತರಿಸಿಕೊಂಡಿರಿ. ನಾಮಕರಣ ಮಾಡುವಾಗ, ಒಂದು ಕಾರ್ಪೋರೇಷನ್ನಿಗೆ ೮೦ ೧೦೦ ರಷ್ಟು ಸದಸ್ಯರನ್ನು ನಾಮಕರಣಮಾಡಿ, ಮೇಯರ್ ಡೆಪ್ಯುಟಿ ಮೇಯರನ್ನು ತಾವೇ ನಾಮಕರಣ ಮಾಡಿದರೆ ಇವರನ್ನು ಯಾರು ನೋಡಿಕೊಳ್ಳುವವರು. ಜನರೇ ಇದ್ದರೆ, ಅವರ ಮೇಲೆ ಹತೋಟಿ ಇರುತ್ತದೆ, ಅವರಿಗೇ ಜನರ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ ಕಾಳಜಿ ಇರುತ್ತದೆ. ಇಲ್ಲದೆ. ಹೋದರೆ ನಾಮಕರಣ ಮಾಡಿದ ಸದಸ್ಯರನ್ನು ನೋಯಲಿಕ್ಕೆ ಬಿಟ್ಟಿಹಾಗೆ ತಾವು ಅಧಿಕಾರವನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ಆಪರನ್ನು ಇವತ್ತು ನೀವು ಹಾಕಬಹುದು, ನಾಳೆ ಕಿತ್ತುಹಾಕಬಹುದು, ಅಥವಾ ಚುನಾವಣೆ ಆದಾಗ ಹೋಗಬಹುದು, ಅದು ಪ್ರಶ್ನೆಯಲ್ಲ. ಇದರಿಂದ ತಮ್ಮ ಸರ್ಕಾರದ ಮೇಲೆ ಕೆಟ್ಟಪರಿಣಾಮ ಆಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತಮ್ಮ ಸರ್ಕಾರದ ಅವಧಿ ಬಗ್ಗೆ ಅಥವಾ ಆಡಳಿತ ಪಕ್ಷದ ಬಗ್ಗೆ ನಾನು ಹೇಳುವುದಕ್ಕೆ ಹೋಗುತ್ತಾ ಇಲ್ಲ. ತಾವು ಕೆಲವು ಮಂದಿಯನ್ನು ಸಮಾಧಾನಪಡಿಸಲಿಕ್ಕೋಸ್ಕರ ಈ ಒಂದು ಅಧಿಕಾರವನ್ನು ತೆಗೆದುಕೊಳ್ಳುತಾ ಇದ್ದೀರಿ. ಕೆಲವರು ಇಂತಹ ಅವಕಾಶವನ್ನು ಪಡೆದುಕೊಂಡು ನಾಳೆ ಕೌನ್ಸಿಲರಾಗಿ ಬರುತ್ತಾರೆ.

ಇದು ತಮಗೂ ಕೂಡ ಒಳ್ಳೆಯದಲ್ಲ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಒಂದು ರಾಜ್ಯದ ಆಡಳಿತವನ್ನು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ನಡೆಸುವುದಕ್ಕೆ ಮತ್ತು ಈ ಒಂದು ಸದನದಲ್ಲಿ ನಿರ್ಣಯವಾಗುವಂಥಾ ಧೋರಣೆಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಜನರನ್ನು ಚುನಾವಣೆ ಮಾಡಿ ಅವರಿಂದ ಸಹಕಾರ ಪಡೆಯುವುದನ್ನು ಬಿಟ್ಟು ಸರ್ಕಾರ ಈ ರೀತಿಯಲ್ಲಿ ಇಚ್ಛಾನುಸಾರ ತಮ್ಮ ಹತ್ತಿರ ಬಂದು ಯಾರೋ ಒಕ್ಕಡ ಹೇರುತ್ತಾರೆಂದು, ಯಾರು ತಮ್ಮ ಸ್ವಾರ್ಥ ಸಾಧನೆಗೋಸ್ಕರವಾಗಿ ನಿಮ್ಮ ಹತ್ತಿರ ಓಡಾಡಿಕೊಂಡಿರುತ್ತಾರೆ ಅಂಥವರಿಗೆ ಇದರಿಂದ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ ಆ ರೀತಿಯಿಂದ ಇದು ಆ ರೀತಿ ಯಾಗಬಾರದೆಂದು ಕೇಳಿಕೊಳ್ಳುತ್ತೇನೆ. ಅದರಿಂದ ಯಾರಿಗೂ ಒಳ್ಳೆಯದಲ್ಲ. ಇದರ ಬಗ್ಗೆ ಎಲ್ಲಾ ಮಾತನಾಡಿದ್ದಾರೆ, ನಾನು ಕೂಡ ಅವರು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇಷ್ಟಕ್ಕೂ ನಮ್ಮಲ್ಲಿ ಭ್ರಷ್ಟಾಚಾರ ಎನ್ನುವುದು ಯಾವ ಮಟ್ಟಕ್ಕೆ ಹೋಗಿದೆ ಎನ್ನುವುದನ್ನು ತಾವು ಎಲ್ಲರೂ ತಿಳಿದುಕೊಂಡಿದ್ದೀರಿ. ತಮಗೆ ಗೊತ್ತಿದ್ದರೂ ಸಹ ಮತ್ತಕ್ಕೆ ಈ ನಾಮಕರಣ

ಮಾಡುವುದಕ್ಕೆ ಕೈ ಹಾಕುತ್ತಿದ್ದೀರಿ, ಎಷ್ಟು ಕಾಲದಿಂದಲೂ ಚುನಾವಣೆಗಳು ಇಲ್ಲದೆ ನಡೆದುಕೊಂಡು ಬರುತ್ತಿದೆ, ಆದಕ್ಕೆ ತಾವು ಆದಷ್ಟು ಬೇಗ ಚುನಾವಣೆಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಇನ್ನು ೬ ತಿಂಗಳೊಳಗೆ ಮಾಡಿದಿದ್ದರೆ ಏನೂ ಮುಳಿಗಿ ಹೋಗುವುದಿಲ್ಲ. ಆದನ್ನು ಬಿಟ್ಟು ನೀವು ನಾಮಕರಣ ಮಾಡಿ ಅವರು ೩ ವರ್ಷಗಳ ಕಾಲ ನಮ್ಮನ್ನು ಆಳಬೇಕಾದ ಅವಶ್ಯಕತೆ ಏನೂ ಇಲ್ಲ, ಮತ್ತೆ ಅದರಿಂದ ನಾವು ಪಾಠ ಕಲಿಯಬೇಕಾಗಿಲ್ಲ. ಇವತ್ತು ಪಾರ್ಲಿಮೆಂಟ್ ಚುನಾವಣೆ ನಡೆದರೆ ಎಂಥಾ ಸರ್ಕಾರವನ್ನು ಆಡಳಿತಕ್ಕೆ ತರಬೇಕು ಬಿಡಬೇಕು ಎನ್ನುವುದು ನಮ್ಮ ಜನತೆ ತೋರಿಸಿ ಕೊಟ್ಟಿದ್ದಾರೆ, ಈ ದೇಶದ ಜನ ಹೀಗಿರುವಾಗ ನೀವು ಕೇವಲ ಕಾರ್ಪೊರೇಷನ್‌ಗಳಿಗೆ ಚುನಾವಣೆ ನಡೆಸದೇ ನಾಮಕರಣ ಮಾಡಿ ಅವರಿಂದ ನಾವು ಪುನಃ ಪಾಠ ಕಲಿಯಬೇಕಾದ್ದು ಏನೂ ಇಲ್ಲ. ಇವತ್ತು ಯಾರೋ ಕೆಲವರನ್ನು ನೇಮಕ ಮಾಡಿ ಬಿಟ್ಟು ಅವರು ಮೇಯ್ಯುವುದಕ್ಕೆ ಬಿಟ್ಟರೆ ಇದರಿಂದ ಯಾರಿಗೂ ಪ್ರಯೋಜನವಿಲ್ಲ, ಇದರಿಂದ ದೇಶಕ್ಕೆ ಅನಾಹುತವಾಗುವುದಕ್ಕೆ ಕಾರಣವಾಗುತ್ತದೆ ಎನ್ನುವ ವಿಷಾದನ್ನು ಮಾತ್ರ ಹೇಳಬಯಸುತ್ತೇನೆ. ತಮಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳವರಿಗೇನೋ ಒಳ್ಳೆಯ ಸದುದ್ದೇಶವಿದೆ ಆದರೆ ಅದರಿಂದ ಹೆಚ್ಚು ಲಾಭ ಜನತೆಗೆ ದೊರೆಯುವ ಹಾಗೆ ಇರಬೇಕೆಂದು ಈ ಮಾತನ್ನು ಹೇಳುತ್ತಿದ್ದೇನೆ. ಮೂಲ ಭೂತವಾಗಿ ಸರ್ಕಾರ ನಾಮಕರಣ ಮಾಡುವಂಥಾ ಪದ್ಧತಿಯನ್ನು ತಾವು ಕೈ ಬಿಡಬೇಕು ಇವತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆ ಮಾಡುವುದಕ್ಕೆ ಇನ್ನು ೪ ತಿಂಗಳ ಕಾಲ ತಡವಾದರೂ ಪರವಾಗಿಲ್ಲ, ನಡೆಸಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ, ತಾವು ಏನೋ ಇವತ್ತು ಹೊಸದಾಗಿ ಕೆಲವು ಕಾರ್ಪೊರೇಷನ್‌ಗಳಿಗೆ ನಾಮಕರಣ ಮಾಡುವಂಥಾ ಕಾನೂನು ತೆಗೆದುಕೊಂಡು ಬರುತ್ತಿದ್ದೀರಿ. ಆದರೆ ಇವತ್ತು ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಎಷ್ಟೋ ಕಾಲದಲ್ಲಿ ಚುನಾವಣೆನೇ ನಡೆದಿಲ್ಲ, ಏತಕ್ಕೆ ನಡೆಸುತ್ತಿಲ್ಲ ? ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಏನೂ ಹೊಸದಲ್ಲ ಅಲ್ಲಿ ಏತಕ್ಕೆ ನೀವು ಚುನಾವಣೆಯನ್ನು ಮಾಡುತ್ತಿಲ್ಲ ? ನೀವು ಇದರಲ್ಲಿ ಸಫಲರಾದರೆ ನಾಳೆ ಬೆಂಗಳೂರು ನಗರ ಕಾರ್ಪೊರೇಷನ್ನಿಗೂ ಇದನ್ನೇ ಅನ್ವಯಿಸಬಹುದು, ಆದೇ ರೀತಿ ಹುಬ್ಬಳ್ಳಿ, ಧಾರವಾಡ ಕಾರ್ಪೊರೇಷನ್ನಿಗೂ ನಾಮಕರಣ ಮಾಡಬಹುದು, ಆದಕ್ಕೂಂದು ನಾಳೆ ಸುಗ್ರೀವಾಜ್ಞೆ ತರುತ್ತೀರಿ ಎನ್ನುವ ಅನುಮಾನ ಬರುತ್ತಿದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನೀವು ಇಂಥಾ ಅನಾವಶ್ಯಕವಾಗಿ ಕಾನೂನುಗಳನ್ನು ತೆಗೆದುಕೊಂಡು ಬರುವುದನ್ನು ನೋಡಿದರೆ ನಿಮಗಂತೂ ಪ್ರಜಾಪ್ರಭುತ್ವ ಸತ್ ಸಂಪ್ರದಾಯದಲ್ಲಿ ಎಳ್ಳಷ್ಟು ನಂಬಿಕೆ ಇಲ್ಲವೆಂದು ಕಾಣುತ್ತದೆ. ಅದಕ್ಕೆ ಒಂದೊಂದಾಗಿ ಕೊಡಲಿ ಪೆಟ್ಟನ್ನು ಹಾಕುತ್ತಿದ್ದೀರಿ ಎಂದು ಭಾಸವಾಗುತ್ತಿದೆ. ಆದಕ್ಕೆ ತಮಗೊಂದು ಎಚ್ಚರಿಕೆಯ ಮಾತನ್ನು ಹೇಳುವುದಾದರೆ ತಾವ್ಯಕೂಡಲೇ ಈ ಮಸೂದೆಯನ್ನು ವಾಪಸ್ಸು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಪ್ರಮೀಳಾ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಈಗ ತಂದಿರುವ ತಿದ್ದುಪಡಿ ಮಸೂದೆಯನ್ನು ಮೊಟ್ಟ ಮೊದಲನೆಯ ಬಾರಿಗೆ ಹೊಸದಾಗಿ ತಂದಿದ್ದಾರೆ ಎನ್ನುವ ದೃಷ್ಟಿಯಿಂದ ಮಾನ್ಯ ಸದಸ್ಯರೆಲ್ಲರೂ ಮಾತನಾಡಿರುವುದನ್ನು ನಾನು ಇದುವರೆಗೆ ಕುಳಿತು ಕೇಳಿದ್ದೇನೆ. ಆದರೆ ಈಗಾಗಲೇ ಮಾನ್ಯ ಮಂತ್ರಿಗಳವರು ಹೇಳಿದ ಹಾಗೆ ಬೊಂಬೈಯಲ್ಲೂ ಮತ್ತು ಬೆಂಗಳೂರು ನಗರದಲ್ಲೂ ಕಾರ್ಪೊರೇಷನ್ ಬಂದಾಗ ಪ್ರಥಮ ಬಾರಿಗೆ ನಾಮಕರಣ ಮಾಡಿದ್ದಾರೆ. ಇದು ತಮಗೆಲ್ಲರಿಗೂ ಗೊತ್ತಿರಬಹುದು. ೧೯೭೮ನೇ ಇಸ್ವಿಯ ನಂತರ ಬಂದ ಕಾನೂನುಗಳಲ್ಲಿ ಇಂಥಾ ಎರಡು ಕಾನೂನುಗಳು ಬಂದಿದೆ. ಕೋ ಆಪರೇಟಿವ್ ಸೊಸೈಟಿಗಳು ಅಮೂಲ್‌ಗಮೇಷನ್ ಆದಂಥ ಸಂದರ್ಭದಲ್ಲಿ, ಎಲ್ಲಾ ಸೊಸೈಟಿಗಳು ಅಮಾಲಗಮೇಟ್ ಆದ ನಂತರ ಹೊಸ ಸೊಸೈಟಿಗಳು ಆದಂಥ ಸಂದರ್ಭದಲ್ಲಿ ಅಂಥಾ ಹೊಸ ಸೊಸೈಟಿಗಳಿಗೆ ನಾಮಕರಣ ಮಾಡುವಂಥಾ ಕಾನೂನನ್ನು ಇದೇ ಸದನದಲ್ಲಿ ತಂದಾಗ ಅದರ ಬಗ್ಗೆ ಯಾರೂ ಕೂಡ ಚಕಾರ ಎತ್ತಿಲ್ಲ. ಮತ್ತೆ ಕೆಲವರು ಇದರ ಬಗ್ಗೆ ಕೋರ್ಟಿಗೂ ಸಹ ಹೋದಾಗ ಅದು ಸಿಂಧುವಾಗಿದೆ. ಇದು ಹೈಕೋರ್ಟಿನಲ್ಲೆ ಮಾತ್ರವಲ್ಲ ಸುಪ್ರೀಂಕೋರ್ಟಿನಲ್ಲೂ ಕೂಡ ಸಿಂಧು ವಾಗಿದೆಂದು ಹೇಳಿದ್ದಾರೆ. ಇದೇ ರೀತಿ ಅಗ್ರಿ ಕಲ್ಚರಲ್ ಪ್ರಡ್ಯೂಜ್ ಮಾರ್ಕೆಟ್ ಕಮಿಟಿಗಳು ಕೂಡ ಅಮಾಲ್ಗಮೇಟ್ ಆಗಿ ಪುನಃ ಹೊಸದಾಗಿ ಮಾರ್ಕೆಟ್ ಕಮಿಟಿಗಳನ್ನು ಮಾಡುವಾಗ ನಾಮಿನೇಟ್ ಮಾಡುವಂಥಾ ಕಾನೂನು ತಂದಿದ್ದರು ಅದರ ಬಗ್ಗೆ ಕೂಡ ಕೋರ್ಟಿನಲ್ಲಿ ಚಾಲೆಂಜ್ ಮಾಡಿದಾಗ ಅದೂ ಕೂಡ ಸಿಂಧುವಾಗಿದೆ, ಆದುದರಿಂದ ಈಗ ಏನು ಹೊಸದಾಗಿ ನಾಮಕರಣ ಮಾಡುವ ಬಗ್ಗೆ ತಂದಿದ್ದಾರೆ ಇದರ ಬಗ್ಗೆ ಏನೂ ಯೋಚನೆ ಮಾಡ

ಬೇಕಾದ್ದು ಇಲ್ಲ. ಪಟ್ಟಣ ಬೆಳೆಯಬೇಕಾದರೆ ಹಳ್ಳಿ ಬೆಳೆಯಬೇಕು, ಹಳ್ಳಿ ಬೆಳೆಯಬೇಕಾಗಿದ್ದರೆ ಪಟ್ಟಣ ಬೆಳೆಯಬೇಕು. ಬೆಂಗಳೂರು ಪಟ್ಟಣ ಬೆಳೆದಂತೆ ಮೈಸೂರು, ಬಳ್ಳಾರಿ, ಮಂಗಳೂರು ಹುಬ್ಬಳ್ಳಿ ಧಾರವಾಡ, ಬೆಳಗಾಂ ಸಿಟಿಗಳು ಸಹ ಬೆಳೆಯುತ್ತಿದೆ. ಇದಕ್ಕೆ ಬೇಕಾದಂಥ ಸಲಕರಣೆಗಳನ್ನು ಕೇಂದ್ರ ಸರ್ಕಾರದ ಪತಿಯಿಂದಲೂ ಮತ್ತು ಬೇರೆ ಕಡೆಯಿಂದಲೂ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಿದೆ. ಈಗ ಉದಾಹರಣೆಗೆ ಕೆಲವು ಕಡೆ ಕಾರ್ಪೊರೇಷನ್‌ನ್ನು ಹೊಸದಾಗಿ ಮಾಡಿದಾಗ ಆಲ್ಲಿಗೆ ನಾಮಕರಣ ಮಾಡತಕ್ಕ ಸಂದರ್ಭದಲ್ಲಿ ಆ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದು ಆಲ್ಲಿಯ ಜನಗಳಿಗೆ ಹೆಚ್ಚು ಉಪಯೋಗವಾಗುವುದಕ್ಕೆ ಅನುಕೂಲವಾಗುತ್ತದೆ ಮತ್ತು ಸರ್ಕಾರದ ಪತಿಯಿಂದ ಅನುಕೂಲ ಪಡೆಯುವುದಕ್ಕೆ ಆಗುತ್ತದೆ ಮತ್ತು ಹೆಚ್ಚು ಟ್ಯಾಕ್ಸ್‌ಗಳನ್ನು ಕಾರ್ಪೊರೇಷನ್ ಪತಿಯಿಂದ ಹಾಕುವುದಕ್ಕೆ ಅನುಕೂಲ ವಾಗುತ್ತದೆ ಇಂಥಾ ಒಂದು ಸದುದ್ದೇಶದಿಂದ ತಂದಿರತಕ್ಕ ಬಿಲ್ ಆಗಿರುವುದರಿಂದ ಇದರಲ್ಲಿ ತಪ್ಪೇನಿಲ್ಲ ವೆಂದು ನನ್ನ ಭಾವನೆ. ನಮ್ಮ ಶ್ರೀ ಬೊಮ್ಮಾಯ್‌ರವರು ಮಾತನಾಡುತ್ತಾ ನಾಮಿನೇಷನ್ ಮಾಡತಕ್ಕ ಸಂದರ್ಭದಲ್ಲಿ ಹಳೇ ಕಾರ್ಪೊರೇಟರ್‌ಗಳನ್ನು ಎಕ್ಸ್ ಕಾರ್ಪೊರೇಟರ್‌ಗಳನ್ನು. ಶಾಸಕರು ಇಂಥವರನ್ನು ನಾಮಿನೇಟ್ ಮಾಡಿದರೆ ಅದರಿಂದ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿದರು. ಆದರೆ ಅಧ್ಯಕ್ಷಣೀಯವರೇ ನಾಮಿನೇಟ್ ಮಾಡತಕ್ಕ ಸಂದರ್ಭದಲ್ಲಿ ಹಳಬರೇ ಬರಬೇಕು ಎನ್ನುವುದರಲ್ಲಿ ಅರ್ಥವಿಲ್ಲ, ಹೊಸಬರಿಗೂ ಅವಕಾಶವಿದ್ದರೆ ಅವರೂ ಸಹ ಕಾರ್ಪೊರೇಷನ್ ಆಡಳಿತದ ಬಗ್ಗೆ ಮಾಹಿತಿ ತಿಳಿದು ಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಿರುತ್ತದೆ. ಇನ್ನು ಪೆಡ್ಯೂಲ್ ಕ್ಯಾಸ್ಟ್‌ನವರು ಬಾರದೇ ಇರತಕ್ಕ ಸಂದರ್ಭದಲ್ಲಿ ಮಹಿಳೆಯರಿಗೆ ಅವಕಾಶವನ್ನು ಕೊಟ್ಟರೆ ಆಗ ಎಲ್ಲರಿಗೂ ಸಮಾನವಾದ ಅವಕಾಶವನ್ನು ಕೊಟ್ಟಾಗಾಗುತ್ತದೆ, ಆದುದರಿಂದ ಈ ಕೆಲಸವನ್ನು ತಾವು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕ್ಲಾಜ್ 3(ಎ) ನಲ್ಲಿ ಫಸ್ಟ್ ಮೇಯರ್, ಡೆಪ್ಯೂಟಿ ಮೇಯರ್, ಅಥವಾ ಫಸ್ಟ್ ಕೌನ್ಸಿಲರ್ ಎಂದು ಹೇಳಿದ್ದೀರಿ, ಅಂಥವರು ನಾಮಿನೇಟ್ ಆದ ಮೇಲೆ ರೆಸ್ಟಿನೇಷನ್ ಕೊಟ್ಟರೆ ಅಥವಾ ಮರಣ ಹೊಂದಿದ ಸಂದರ್ಭದಲ್ಲಿ ಅವರ ಬಗ್ಗೆ ಏನು ಮಾಡಬೇಕು ಎಂದು ಏನೂ ಇದರಲ್ಲಿ ಕೊಟ್ಟ ಹಾಗಿಲ್ಲ. ಆದುದರಿಂದ ಇದರ ಬಗ್ಗೆ ಸೂಕ್ತ ಗಮನ ಕೊಟ್ಟು ಸೂಕ್ತವಾದ ಅಮೆಂಡ್‌ಮೆಂಟ್ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Statement by the Chief Minister regarding the Sharng of Caluvery Water.

ಶ್ರೀ ಆರ್. ಗುಂಡೂರಾವ್.—ಶ್ರೀಮಾನ್ ದೇವೇಗೌಡರು ಮತ್ತು ಶ್ರೀ ಬೊಮ್ಮಾಯಿರವರು ನಿನ್ನೆ ತಮಿಳು ನಾಡಿನ ಮುಖ್ಯ ಮಂತ್ರಿಗಳವರು ಅಲ್ಲಿಯ ವಿಧಾನ ಸಭೆಯಲ್ಲಿ ಕಾವೇರಿ ನೀರಿನ ವಿವಾದದ ಬಗ್ಗೆ ಮಾತನಾಡಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನೆಂದು ಕೇಳಿಕೊಂಡಿದ್ದರ ಮೇಲೆ ಇವತ್ತು ನಾನು ನಮ್ಮ ಸರ್ಕಾರದ ನಿಲುವು ಏನು ತಾಳಿದೆ ಎನ್ನುವುದನ್ನು ಈಗ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

In pursuance of the desire of the then Union Minister for Irrigation Shri Rao Birendra Singh, a bilateral meeting of the Chief Ministers of Tamil Nadu and Karnataka was arranged. With a view to narrow down the differences and come to an amicable settlement on Cauvery issue, the meeting was held on the 14th and 15th October 1981 at Bangalore.

At this meeting, the Chief Minister, Tamil Nadu made it very clear that he and his team had come with an open mind and not with any pre-conceived idea. This was however, not reflected in the discussions.